

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor: MARUTIBASAVANTAPPAHOSAMANI

Cell : +91 9741319119

Volume : 07 Issue : 24 Friday 27-09-2024 E-mail : maruti.b.hosamani76@gmail.com Page: 4 Price : Rs. 1/-


## ಬದುಕಿನಲಿ ಸದಾ ಖುಷಿ ಖುಷಿ ಇರಿ



ಜೀವನ ಅನುಬಂಧ
ಗಂಧ ಸುಗಂಧ
ಬಂಧ ಅನುಬಂಧ
ದಿನ ಅನುದಿನ
ಸುಖ ಸುಖಾನುಭವ
ರುಚಿ ರುಚಿಕರ
ಸುಚಿ ಸುಚಿಕರ
ಸ್ನೇಹ ಸ್ನೇಹಮಯ
ಪ್ರೇಮ ಪ್ರೇಮಮಯ
ಮೇಘ ಮೇಘಮಾಲೆ
ಹೂವು ಹೂವು ಬಾಣ
ಸ್ವರ ಸ್ವರಮಾಲೆ
ಭಾವ ಭಾವಬಂಧ
ಸ್ವಭಾವ ಸುಭಾವ
ಕರುಣೆ ಕರುಣಾಮಯ
ಸುಂದರ ಸೌಂದರ್ಯ
ಸ್ವರ ಸುಸ್ವರ
ನಮ್ಮತನದಲಿರುವ ಸಿರಿ
ಸಿಹಿ ಸಿರಿತನದ ರೂವಾರಿ
ದೇವ ನೀಡಿದ ಸಿರಿ ಬಳಸಿ
ಬಾಳಿನ ಪಯಣದಲಿ ತೃಪ್ತ
ಸಂತೃಪ್ತತೆ ಇರಲಿ ಬದುಕಿನಲಿ
ಸದಾ ಖುಷಿ ಖುಷಿ ಇರಿ

**–ಶ್ರೀದೇಶಂಸು**
**ಶ್ರೀ ಸುರೇಶ ಶಂಕ್ರೆಪ್ಪ ಅಂಗಡಿ**
**ಆರೋಗ್ಯ ನಿರೀಕ್ಷಣಾಧಿಕಾರಿ**
**"ವಿಶ್ವ ಆರೋಗ್ಯ ಸಂಜೀವಿನಿ"**
**ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರು**
**ಬಾಗಲಕೋಟೆ**

## ಲಾರಿ ಮತ್ತು ಕಾರು ಮಧ್ಯೆ ಭೀಕರ ಅಪಘಾತ ಸಂಭವಿಸಿ – ನಾಲ್ವರು ಸ್ಥಳದಲ್ಲೇ ದುರ್ಮರಣ





**ಸಿಹಿ ಕಹಿ ಸುದ್ದಿ**
**ಹುನಗುಂದ:** ಲಾರಿ ಮತ್ತು ಕಾರು ಮಧ್ಯೆ ಮುಖಾ ಮುಖಿ ಭೀಕರ ಅಪಘಾತ ಸಂಭವಿಸಿ ನಾಲ್ವರು ಸ್ಥಳದಲ್ಲೇ ಮೃತಪಟ್ಟ ಘಟನೆ ಗುರವಾರ ಹುನಗುಂದ ತಾಲ್ಲೂಕಿನ ಧನ್ನೂರ ಟೋಲ್ ನಾಕಾ ಸಮೀಪದಲ್ಲಿ ನಡೆದಿದೆ.

ಮೃತರನ್ನು ಮುದ್ದೇಬಿಹಾಳ ತಾಲ್ಲೂಕಿನಬಿದರಕುಂದಿಯಗ್ರಾಮದ ಪ್ರಥಮ ದರ್ಜೆ ಗುತ್ತಿಗೆದಾರ ಲಕ್ಷ್ಮಣ ಮುಕಾರಪ್ಪ ವಡ್ಡರ (55),ಬೈಲಪ್ಪ ಹನಮಂತರಾಯ ಬಿರಾದಾರ(46), ಕಾರು ಚಾಲಕ ಮಹ್ಮದರಫೀಕ ಹಾಜಿಮಲಂಗ ಮುಲ್ಲಾ (23) ಮುದ್ದೇಬಿಹಾಳದ ರಾಮಣ್ಣ ರಂಗಪ್ಪ ನಾಯಕ ಮಕ್ಕಳ (57) ಮೃತ ದುರ್ದೈವಿಗಳೆಂದು ಗುರುತಿಸಲಾಗಿದೆ.

ಘಟನೆ ವಿವರ–ಲಕ್ಷ್ಮಣ ವಡ್ಡರ ಸೇರಿದಂತೆ ಮೂವರು ತಮ್ಮ ವೈಯಕ್ತಿಕ ಕೆಲಸಕ್ಕಾಗಿ ಬಳ್ಳಾರಿಗೆ ಹೋಗಿ ಮರಳುವಾಗ ಹುಲಿಗೆಮ್ಮನ ದೇವಸ್ಥಾನದ ದರ್ಶನ ಪಡೆದು ವಾಪಸ್ ಗ್ರಾಮಕ್ಕೆ ಬರುವಾಗ ಗುರುವಾರ ಬೆಳಗಿನ ಜಾವ ಧನ್ನೂರ ಟೋಲ್ ನಾಕ್ ಬಳಿ ಈ ಭೀಕರ ದುರ್ಘಟನೆ ಸಂಭವಿಸಿದೆ. ಘಟನಾ ಸ್ಥಳಕ್ಕೆ ಅಡಿಷನಲ್ ಎಸ್ಪಿಪ್ರಸನ್ನದೇಸಾಯಿ,ಹುನಗುಂದ ಠಾಣೆಯ ಸಿಪಿಐ ಸುನೀಲಕುಮಾರ ಸವದಿ, ಪಿಎಸ್ಐ ಪ್ರಕಾಶ.ಡಿ ಭೇಟಿ ನೀಡಿ ಪರಿಶೀಲಿಸಿ ಪ್ರಕರಣವನ್ನು ದಾಖಲಿಸಿ ಕೊಂಡಿದ್ದಾರೆ.

ಕುಟುಂಬಸ್ಥರ ಆಕ್ರಂದನ–ಕಾರು ಇನ್ನೂ 20 ನಿಮಿಷ ಕ್ರಮಿಸಿದ್ದರೆ ಮನೆ ಸೇರುತ್ತಿದ್ದರು, ಜವರಾಯನ ಅವಕೃಪೆಗೆ ನಾಲ್ವರ ಜೀವವನ್ನು ತೆಗೆದು ಕೊಂಡಿತು ಎಂದು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ನಮ್ಮ ದೊಡ್ಡಪ್ಪ ಹುಲಿಯಂತೆ ಇದ್ದನ ರೀ ಆದರೆ ಹುಲಿಗೆಮ್ಮನ ದರ್ಶನಮಾಡಿಕೊಂಡು ಬಂದರುನೂ ದೇವರು ನಮ್ಮ ದೊಡ್ಡಪ್ಪನ ಕಾಪಾಡಲಿಲ್ಲ ಎಂದು ಮೃತ ವ್ಯಕ್ತಿ ಲಕ್ಷ್ಮಣ ಅವರ ತಮ್ಮನ ಮಗ ಶಿವಾನಂದ ವಡ್ಡರ ನೋವು ವ್ಯಕ್ತಪಡಿಸುತ್ತಿದ್ದಾರೆ. ಉಳಿದ ಮೂವರ ಮೃತ ವ್ಯಕ್ತಿಗಳ ಸಂಬಂಧಿಕರು ಮತ್ತು ಕುಟುಂಬಸ್ಥರು ಬೆಳಿಗ್ಗೆ ಗುಂಪು ಗುಂಪಾಗಿ ಆಗಮಿಸಿ ಶವಗಾರದ ರಸ್ತೆ ಬದಿಯಲ್ಲಿ ಕುಳಿತು ರೋಧಿಸುತಿದ್ದ ದೃಶ್ಯ ಕಂಡು ಬಂದಿತು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮಲ್ಲಿಕಾರ್ಜುನ. ಎಂ.ಬಂಡಲಗಲ್ಲ. ಹುನಗುಂದ**

## ಸೆಪ್ಟಂಬರ್ 28 ರಂದು ಗ್ರಾಮ ಪಂಚಾಯಿತಿ ನೌಕರರಿಂದ ಸಮ್ಮೇಳನ



**ಸಿಹಿ ಕಹಿ ಸುದ್ದಿ,**
**ಮಾನ್ವಿ :** ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘ ಸಿಐಟಿಯು ಸಂಯೋಜಿತದ ಅಡಿಯಲ್ಲಿ 10 ನೆ. ಜಿಲ್ಲಾ ಸಮ್ಮೇಳನ ಕಾರ್ಯಕ್ರಮವನ್ನು ಸೆಪ್ಟೆಂಬರ್ 28 ರಂದು ಈದ್ಗಾ ಫಂಕ್ಷನ್ ಹಾಲ್ ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಾಮ್ರೇಡ್ ಆರ್.ಎಸ್ ಬಸವರಾಜ ತಿಳಿಸಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿ ಗೋಷ್ಠಿಯಲ್ಲಿ ಮಾತನಾಡಿ, ಗ್ರಾಮ ಪಂಚಾಯತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ ವಸೂಲಿಗಾರ, ಕ್ಲಾರ್ಕ್, ಡಾಟಾ ಎಂಟ್ರಿ ಆಪರೇಟರ್, ಹಾಗು ನೀರು ಗಂಟಿಗಳನ್ನು ಸೇರಿದಂತೆ ಇನ್ನಿತರರನ್ನು ಸರಕಾರಿ ನೌಕರ–ರೆಂದು ಘೋಷಿಸಬೇಕು ಎಂದರು.

ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುವ ನೌಕರರಿಗೆ ನಿವೃತ್ತಿ ಅಥವಾ ಮರಣ ಹೊಂದಿದರೆ ಅವರಿಗೆ ಪ್ರತಿ ತಿಂಗಳು ಕನಿಷ್ಠ 6 ಸಾವಿರ ರುಪಾಯಿ ಪಿಂಚಣಿ ನೀಡಬೇಕು ಎಂದು ಆಗ್ರಹಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ. ಕನಕ್ಕುಂದಿ.ಮಾನ್ವಿ**

## ರಕ್ತದಾನ ಮಹಾದಾನ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ಸಿ. ಚೇತನ್



**ಸಿಹಿ ಕಹಿ ಸುದ್ದಿ,**
**ಖಾನಾ ಹೊಸಹಳ್ಳಿ :** ಪಟ್ಟಣದ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಆವರಣದಲ್ಲಿ ಗುರುವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯನಗರ ಜಿಲ್ಲೆ, ಪ್ರಾಥಮಿಕ ಆರೋಗ್ಯ ಕೇಂದ್ರ ಖಾನಾ ಹೊಸಹಳ್ಳಿ ಇವರ ನೇತೃತ್ವದಲ್ಲಿ ಸ್ವಯಂ ಪ್ರೇರಿತಾ ರಕ್ತದಾನ ಶಿಬಿರ ಹಮ್ಮಿ ಕೊಳ್ಳಲಾಗಿತ್ತು. ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಗ್ರಾ.ಪಂ ಅಧ್ಯಕ್ಷ ಎ.ಸಿ ಚೇತನ್ ರಕ್ತದಾನ ಮಹಾದಾನ ವಾಗಿದೆ. ಅಪಘಾತ ಹಾಗೂ ಇತರ ತುರ್ತು ಚಿಕಿತ್ಸೆ ಸಂದರ್ಭದಲ್ಲಿ ರೋಗಿಗೆ ರಕ್ತದ ಅವಶ್ಯಕತೆ ಬಹಳ ಇರುತ್ತದೆ. ಆ ಸಮಯ ರೋಗಿ ಪಾಲಿಗೆ ಪ್ರತಿ ನಿಮಿಷವೂ ಅಮೂಲ್ಯ. ರಕ್ತ ಕೊರತೆ ತಪ್ಪಿಸಿ, ಆತನ ಪ್ರಾಣ ಉಳಿಸಲು ರಕ್ತ ಅತ್ಯವಶ್ಯವಕವಾಗಿರುತ್ತದೆ ಎಂದರು.

ಈ ಸಂದರ್ಭದಲ್ಲಿ ಹೊಸಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ, ಅಭಿಷೇಕ್ ಮಾತನಾಡಿ ಸಾಮಾನ್ಯವಾಗಿ ರಸ್ತೆ ಅಪಘಾತದಲ್ಲಿ ರಕ್ತ ಸ್ರಾವಗೊಂಡ ರೋಗಿಗಳು ಮತ್ತು ಹೆರಿಗೆ ಸಂದರ್ಭದಲ್ಲಿ ಗರ್ಭಿಣಿಯರಿಗೆ ರಕ್ತದ ಅವಶ್ಯಕತೆ ಇರುತ್ತದೆ. ಇಂಥ ಸಂದರ್ಭದಲ್ಲಿ ರಕ್ತ ದಾನಿಗಳು ನೀಡುವ ರಕ್ತ ಮಹತ್ವ ಪಡೆಯುತ್ತದೆ. ಒಬ್ಬರ ರಕ್ತ ದಾನದಿಂದ ಮೂರು ಜನರ ಪ್ರಾಣ ಉಳಿಸಬಹುದಾಗಿದೆ ಎಂದು ಹೇಳಿ ರಕ್ತ ದಾನದ ಮಹತ್ವವನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ನೇತ್ರಾವತಿ ಮಂಜುನಾಥ, ವೈದ್ಯಾಧಿಕಾರಿ ಡಾ ಅಭಿಷೇಕ್, ಎಲ್ಎಚ್.ವಿ ಭಾರತಿ, ರಾಘವರಡ್ಡಿ, ಕೃಷ್ಣ, ಮಹೇಂದ್ರ, ಕಿ.ಪ್ರ.ತಾ. ಅಧಿಕಾರಿ ಸೋಮಶೇಖರ್ ಕೆ.ಆರ್, ಪ್ರಸಾದ್, ಬೋರಣ್ಣ, ಶಶಿಧರ, ರಮ್ಯಾ ಇ.ಎಸ್, ಸುಧಾ, ರೇಖಾ, ಸವಿತಾ, ಆಶ್ರೀಫ್ ಬಾನು, ಸುರೇಶ್ ಸೇರಿದಂತೆ ಗ್ರಾ.ಪಂ ಸರ್ವ ಸದಸ್ಯರು, ಮುಖಂಡರು, ಆಶಾ ಕಾರ್ಯಕರ್ತೆಯರು ಮತ್ತು ರಕ್ತ ಧಾನಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನೆಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

## ಬಾಡಗಂಡಿಯಲ್ಲಿ ಈರುಳ್ಳಿ ಬೆಳೆ ಕ್ಷೇತ್ರೋತ್ಸವ: ರೈತನಿಗೆ ಸನ್ಮಾನ



**ಬಾಗಲಕೋಟೆ :** ಬೀಳಗಿ ತಾಲೂಕಿನ ಬಾಡಗಂಡಿ ಗ್ರಾಮದ ಈರುಳ್ಳಿ ಬೆಳೆಗಾರ ಲಕ್ಷ್ಮಣ ಸಾಬಣ್ಣ ಅನಗವಾಡಿ ಅವರ ಜಮೀನಿ ನಲ್ಲಿ ಕಲಸ್ ಸೀಡ್ಸ್ ಕಂಪನಿ ತಳಿ,ಕಿಂಗ್ 135 ಈರುಳ್ಳಿ ಮತ್ತು ಸೂಪರ್ ಪ್ಲೇರ್ ಬೆಳೆ ಕ್ಷೇತ್ರೋತ್ಸವ ಕಾರ್ಯಕ್ರಮ ಗುರುವಾರ ಜರುಗಿತು. ಕಾರ್ಯಕ್ರಮದಲ್ಲಿ ಕಲಸ್ ಸೀಡ್ಸ್ ಕಂಪನಿಯ ಜಿಲ್ಲಾ ಮಾರಾಟ ವ್ಯವಸ್ಥಾಪಕ ಮಹಮ್ಮದ ಡೊಣೂರ ಮತ್ತು ಬಸವರಾಜ್ ಆದ–ಾಪುರ ಮಾತನಾಡಿ, ಈ ಭಾಗದಲ್ಲಿ ಈರುಳ್ಳಿ ಬೆಳೆದ ರೈತರು ಆರ್ಥಿಕವಾಗಿ ಸದೃಢರಾಗಿದ್ದಾರೆ,ಒಂದು ಎಕರೆ ಭೂಮಿಗೆ ಸುಮಾರು 180 ಚೀಲದಷ್ಟು ಈರುಳ್ಳಿ ಬೆಳೆದು 'ಯಸ್ವಿಯಾಗಿದ್ದಾರೆ.ಈ ಭಾದದಲ್ಲಿ ಈ ಕಂಪನಿಯ ಈರುಳ್ಳಿ ಬೀಜಗಳು ರೋಗ ನೀರೋಧಕ ಶಕ್ತಿಯನ್ನು ಹೊಂದಿದೆ ಜಿಲ್ಲೆಯಾದ್ಯಂತ ಕಲಶ್ ಸೀಡ್ಸ್ ಕಂಪನಿಯ ಈರುಳ್ಳಿ ಬೀಜ 2 ಬೆಳೆಯಲು ರೈತರು ಆಸಕ್ತಿ ಹೊಂದಿದ್ದಾರೆ ಎಂದರು,ಬಳಿಕ ರೈತ ಲಕ್ಷ್ಮಣ ಸಾಬಣ್ಣ ಅನಗವಾಡಿ ಅವರಿಗೆ ಸನ್ಮಾನಿಸಲಾಯಿತು.ಭಾರತೀಯ ಕಿಸಾನ್ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ್,ಜಿಲ್ಲಾ ವಿತರಕರು ಶಿವಾನಂದ ಗಾಣಿಗೇರ,ಭಾರತೀಯ ಕಿಸಾನ್ ಸಂಘದ ಜಿಲ್ಲಾಧ್ಯಕ್ಷ ವಿರೂಪಾಕ್ಷಯ್ಯ ಪಂ ಹಿರೇಮಠ್,ಸಂಗಯ್ಯ ಹಿರೇಮಠ,ನಿಂಗಪ್ಪ ಹೂಗಾರ,ಸುಬ್ಬರಾಯ ಪಾಟೀಲ್, ಚಂದ್ರಶೇಖರ ಹಳೆಮಣಿ,

ಸಿದ್ದಪ್ಪ ಅನಗವಾಡಿ,ಗುರು ಕಾಖಂಡಕಿ, ಗುರು ಅನಗವಾಡಿ,ಸೇರಿ ಕೊರ್ತಿ,ರೊಳ್ಳಿ,ಗಿರಿಸಾಗರ,ಟಕ್ಕಳಕಿ ಗೋವಿನದಿನ್ನಿ, ಸುತ್ತಮುತ್ತಲಿನ ಗ್ರಾಮದ ರೈತರು ಉಪಸ್ಥಿತರಿದ್ದರು.

## ಸಿಂದಗಿಮಠಗೆ ಸದ್ಭಾವನಾ ಪ್ರಶಸ್ತಿ



**ಗುಳೇದಗುಡ್ಡ :** ಧಾರವಾಡದ ಚೇತನ್ ಪೌಂಡೇಶನ್ ಕರ್ನಾಟಕ ಸೋಶಿಯಲ್ ಕ್ಲಬ್ಇವರ ಸಂಯುಕ್ತ ಆಶ್ರಯದಲ್ಲಿ ಪಂ. ಪುಟ್ಟರಾಜ ಗವಾಯಿಗಳವರ 14ನೇ ಪುಣ್ಯಸ್ಮರಣೆ ಹಾಗೂ ಶಿಕ್ಷಕರ ದಿನಾಚರಣೆ ಅಂಗವಾಗಿ ಧಾರವಾಡದ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ ಕೊಡ ಮಾಡಲ್ಪಡುವ ಡಾ. ಪಂ. ಪುಟ್ಟರಾಜ ಕವಿ ಗವಾಯಿ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿಯನ್ನು ಪಟ್ಟಣದ ಸಂಗೀತ ಶಿಕ್ಷಕ, ಚಂದನ ವಾಹಿನಿಯ ಗಾನಗರಡಿ ಕಲಾವಿದ ಬಸವರಾಜ ಸಿಂದಗಿಮಠ ಅವರಿಗೆ ನೀಡಿಗೌರವಿಸಲಾಯಿತು.

## ರಾಜ್ಯ ಮಟ್ಟದ ರಿವಾಯತ ಹೆಜ್ಜೆ ಮೇಳ ಸ್ಪರ್ಧೆ ಗಡಿನಾಡಿನ ಕರ್ಜಗಿ ಪ್ರಥಮ, ಉಟಗಿಗೆ ದ್ವಿತೀಯ ಬಹುಮಾನ



**ಬೀಳಗಿ :** ತಾಲೂಕಿನ ಹೊಸರೊಳ್ಳಿ ಗ್ರಾಮದ ದರ್ಗಾ ಆವರಣದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಬಾಗಲಕೋಟೆ, ಹೊಸರೊಳ್ಳಿಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸೇವಾ ಸಮಿತಿ, ಹುಸೇನಪೀರ್ ರಿವಾಯತ್ ಹೆಜ್ಜೆ ಮೇಳದ ಸಂಯುಕ್ತ ಆಶ್ರಯದಲ್ಲಿ ಈದ್–ಮಿಲಾದ ಹಬ್ಬದ ಪ್ರಯುಕ್ತ ರಾಜ್ಯ ಮಟ್ಟದ ರಿವಾಯತ ಹೆಜ್ಜೆ ಮೇಳ ಸ್ಪರ್ಧೆಗಳು ಜರುಗಿದವು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಮಾತನಾಡಿ, ಇಂದಿನ ಆಧುನಿಕ ಭರಾಟೆಯಲ್ಲಿ ಜನರನ್ನು ರಂಜಿಸುವ ಜಾನಪದ ಕಲೆಗಳು ಮರೆಯಾಗುತ್ತಿವೆ. ಇಂಥ ಹೊತ್ತಲ್ಲಿ ರಿವಾಯತ ಹೆಜ್ಜೆ ಮೇಳ ಸ್ಪರ್ಧೆ ಇಂದಿನ ಯುವ ಸಮೂಹಕ್ಕೆ ಪ್ರೇರಣೆ ನೀಡಬಲ್ಲವು. ಹೆಜ್ಜೆಗಳಲ್ಲಿ ಸುತ್ತು ಹೆಜ್ಜೆ, ದಾರಿ ಹೆಜ್ಜೆ, ಪಟ್ಟಿ ಹೆಜ್ಜೆ, ಸಾದಾ ಹೆಜ್ಜೆ, ತೆಕ್ಕೆಜ್ಜೆ, ಹುಡೇದ ಹೆಜ್ಜೆ, ಗಡಾದ ಹೆಜ್ಜೆ, ಹುಸಿ ಹೆಜ್ಜೆ ಸೇರಿದಂತೆ ಹೆಜ್ಜೆಗಳಲ್ಲಿ ಹಲವಾರು ವಿಧಗಳಿವೆ. ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುವ ಮೂಲಕ ರಿವಾಯತ ಹಾಡು ಹಾಡುತ್ತಿರುವುದು ವಿಶೇಷವಾಗಿದೆ ಎಂದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾ ಕಾರ್ಯದರ್ಶಿ ಆರ್. ಬಿ. ನಬಿವಾಲೆ ಮಾತನಾಡಿ, ಮೊಹನ್ನದ ಪೈಗಂಬರ್ ಚರಿತ್ರೆ ಅವರ ಬೋಧನೋಪದೇಶ ಕರಿತು ಮಾತನಾಡುತ್ತಾ, ಕುರಾನ್ ಮತ್ತು ಭಗವದ್ಗೀತೆಯಲ್ಲಿ ಅಡಕವಾಗಿರುವ ಸಾಮ್ಯತೆ ಕುರಿತು ತುಲನಾತ್ಮಕವಾಗಿ ಹೇಳಿ, ಎಲ್ಲ ಧರ್ಮದ ಸಾರ ಒಂದೇಯಾಗಿದೆ ಎಂದರು.

ಗ್ರಾಮದ ಮುಖಂಡ ಶಿವಾನಂದ ಗು ನಿಂಗನೂರ ಮಾತನಾಡಿ, ಗ್ರಾಮದ ಮೋಹರಂ ಹಬ್ಬ ಪ್ರಸಿದ್ಧಿ ಹೊಂದಿದ್ದು, ಭಾವೈಕ್ಯತೆ ಯಿಂದ ಜಾತ್ಯಾತೀತ, ಧರ್ಮಾತೀತವಾಗಿ ಇಲ್ಲಿನ ಜನರು ಜಾತ, ಮತ ಭೇದ ಮಾಡದೇ ಒಂದೇ ಕುಟುಂಬದಂತೆ ಬದುಕುತ್ತಿರುವರು. ಇಲ್ಲಿ ರಾಜ್ಯ, ರಾಷ್ಟ್ರ ಮಟ್ಟದ ರಿವಾಯತ ಹೆಜ್ಜೆ ಮೇಳ ಕಲಾವಿದರಿರುವರೆಂದು ಹೇಳಿದರು.

ರಾಜ್ಯಮಟ್ಟದ ರಿವಾಯತ ಹೆಜ್ಜೆಮೇಳ ಸ್ಪರ್ಧೆಯಲ್ಲಿ ನಾಡು, ಗಡಿನಾಡಿನಿಂದಲೂ ರಿವಾಯತ ತಂಡಗಳು ಪಾಲ್ಗೊಂಡು ಕಲಾ ಪ್ರದರ್ಶನ ಮಾಡುವ ಮೂಲಕ ನೋಡುಗರಿಗೆ ರಸದೌತಣ ನೀಡಿದವು. ರಿವಾಯತ ಪದಗಳನ್ನು ಚರಿತ್ರೆಯ ಪದಗಳು, ಆಧ್ಯಾತ್ಮಿಕ ಪದಗಳು, ಕಥಾನಕ ಪದಗಳು, ಸಲಾಂ ಪದಗಳು ಮೊಳಗಿದವು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ 58 ತಂಡಗಳಲ್ಲಿ ಜತ್ತ ತಾಲೂಕಿನ ಕರ್ಜಗಿ ತಂಡ ಪ್ರಥಮ ಮತ್ತು ಉಟಗಿ ತಂಡ ದ್ವಿತೀಯ, ಕರಡಿಗುಡ್ಡ ಮತ್ತು ಬಾಬಾನಗರ ತಂಡ ತೃತೀಯ, ಶೇಗುಣಶಿ ತಂಡ ಚತುರ್ಥ ಬಹುಮಾನ ಪಡೆದುಕೊಂಡವು.

ನಾಗನೂರಿನ ಅಮೋಘಸಿದ್ದ ಪೂಜಾರಿ, ಬಂದೇನವಾಜ ವಾಲಿಕಾರ, ಉತ್ನಾಳದ ಎಚ್. ಎಲ್. ಮಸಬಿನಾಳ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು.

ಸಂಗಯ್ಯ ಮು ಹಿರೇಮಠ ಸಾನ್ನಿಧ್ಯ ವಹಿಸಿದ್ದರು. ಹುಸೇನಸಾಬ ಕ ದೊಡಮನಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಮೇಲೆ ಭೀಮಣ್ಣ ಮ ಕುಬಕಡ್ಡಿ, ಗೋವಿಂದಪ್ಪ ಹ ಸೊಕನಾದಗಿ, ಮಾದೇವಪ್ಪ ಶಿ ಪಟ್ಟಣಶೆಟ್ಟಿ, ಯಮನಪ್ಪ ಚಂ ರೊಳ್ಳಿ, ಸುರೇಶ ವಸ್ತ್ರದ, ಜಂಗಲಿಸಾಬ ಟಗರನ್ನವರ, ಗುರಲಿಂಗಯ್ಯ ಹಿರೇಮಠ, ಮೈಬುಸಾಬ ಮುಲ್ಲಾ ಮತ್ತಿತರಿದ್ದರು.

## ಬ್ಯಾಂಕ್ ಜನ ಜಾಗೃತಿ ಕಾರ್ಯಕ್ರಮ



**ಬಾಗಲಕೋಟೆ :** ಭಾರತೀಯ ರಿಸರ್ವ್‌ಬ್ಯಾಂಕ್‌ಲೋಕಪಾಲರು, ಬೆಂಗಳೂರು ಇವರಿಂದ ಜನ ಜಾಗೃತಿ ಕಾರ್ಯಕ್ರಮ ಬ್ಯಾಂಕಿಂಗ್ ಲೋಕಪಾಲರ ಕಾರ್ಯಾಲಯ, ಭಾರತೀಯ ರಿಸರ್ವ್ ಬ್ಯಾಂಕ್, ಬೆಂಗಳೂರು ಇವರು ಕೆನರಾ ಬ್ಯಾಂಕ್ ಸಹಯೋಗದೊಂದಿಗೆ ಸೆಪ್ಟೆಂಬರ್ 13, 2024 ರಂದು ಬಾಗಲಕೋಟೆಯಲ್ಲಿ ಬ್ಯಾಂಕು ಮತ್ತು ಬ್ಯಾಂಕಿಂಗೇತರ ಹಣ–ಕಾಸು ಸಂಸ್ಥೆಗಳ ಗ್ರಾಹಕರುಗಳ ಅನುಕೂಲಕ್ಕಾಗಿ ಜನ ಜಾಗೃತಿ ಕಾರ್ಯಕ್ರಮ ಆಯೋಜಿಸಿಲಾಗಿ–ತ್ತು.

ಈ ಕಾರ್ಯಕ್ರಮವನ್ನು ಆರ್.ಬಿ.ಐ ನ ಬ್ಯಾಂಕಿಂಗ್ ಲೋಕಪಾಲರ ಕಚೇರಿಯ ವ್ಯವಸ್ಥಾಪಕರು ನಡೆಸಿಕೊಟ್ಟರು. ಗ್ರಾಹಕರ ದೂರುಗಳ ಪರಿಹಾರ ಸಂಬಂಧ ಬ್ಯಾಂಕುಗಳಿಗೆ ಆರ್.ಬಿ.ಐ ನೀಡಿರುವ ಸೂಚನೆಗಳು ಮತ್ತು ತಮ್ಮ ದೂರುಗಳನ್ನು ಕಾಲ ಮಿತಿಯಲ್ಲಿ ಪರಿಹ–ರಿಸಿಕೊಳ್ಳುವುದುಹೇಗೆಎಂಬುದರ ಬಗ್ಗೆ ಸಭಿಕರಿಗೆ ಮಾಹಿತಿ ನೀಡಿದರು. ಭಾರತೀಯ ರಿಸರ್ವ್ ಬ್ಯಾಂಕ್–ಏಕೀಕೃತ ಲೋಕಪಾಲ ಯೋಜನೆ 2021 ರ ಅಡಿಯಲ್ಲಿ ಇರುವ ಪರಿಹಾರ ವಿಧಾನಗಳ ಬಗ್ಗೆಯೂ ತಿಳಿಸಿಕೊಟ್ಟರು.

ದೂರುಗಳನ್ನು ಆರ್.ಬಿ.ಐ.ನ ಅಂಖ ಪೋರ್ಟಲ್ (https://cms.rbi.org.in) ಮತ್ತು ಯೋಜನೆಯ ಇತರ ಮಾಧ್ಯಮಗಳ ಮೂಲಕ ಹೇಗೆ ಸಲ್ಲಿಸಬೇಕು ಎಂಬುವುದರ ಬಗ್ಗೆಯೂ ಮಾಹಿತಿ ತಿಳಿಸಿ ದರು. ನಾನಾ ವಿಧದ ವಂಚನೆ ಗಳನ್ನು ತಡೆಯುವುದಕ್ಕೆ ತೆಗೆದುಕೊಳ್ಳ ಬೇಕಾದ ಮುಂಜಾಗೃತಾ ಕ್ರಮಗಳ ಬೆಗ್ಗೆಯೂ ವಿವರಣೆ ನೀಡಿದರು.

ಸುಮಾರು 250 ಗ್ರಾಹಕರು ಈ ಕಾರ್ಯಕ್ರಮದಲ್ಲಿ ಭಾಗವಸಿದ್ದರು. ಹಾಗೂ ಪ್ರಶ್ನೋತ್ತರ ಅವಧಿಯನ್ನೂ ಸಹಾ ಏರ್ಪಡಿಸಲಾಗಿತ್ತು, ಸಭಿಕರ ಪ್ರಶ್ನೆಗಳಿಗೆ ಆರ್ ಬಿ ಐ ನ ಬ್ಯಾಂಕಿಂ–ಗ್ ಲೋಕಪಾಲರ ಕಚೇರಿಯ ಅಧಿಕಾರಿಗಳು ಹಾಗೂ ಕೆನರಾ ಬ್ಯಾಂಕ್ ವತಿಯಿಂದ ಬಂದಂತಹ ಅಧಿಕಾರಿಗಳು ಉತ್ತರಿಸಿದರು. ರಿಸರ್ವ್ ಬ್ಯಾಂಕ್– ಏಕೀಕೃತ ಲೋಕಪಾಲ ಯೋಜನೆ 2021 ಗೆ ಸಂಬಂಧಿಸಿದ ಕರಪತ್ರ ಮತ್ತು ಕಿರು ಹೊತ್ತಿಗೆಗಳನ್ನು ಸಭಿಕರಿಗೆ ಹಂಚಲಾಯಿತು. ಭಾಗವಹಿಸಿದ ಎಲ್ಲರೂ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಸೂಚಿಸಿದರು.

# ಗ್ರಾಮ ನೈರ್ಮಲ್ಯಕ್ಕೆ ತಿಳುವಳಿಕೆ ಮೂಡಿಸಿ

**ನರಗುಂದ :** ಗ್ರಾಮೀಣ ಪ್ರದೇಶಗಳಲ್ಲಿ ಶುಚಿತ್ವ ಕಾಪಾಡಬೇಕಾದರೆ ಪ್ರತಿಯೊಂದು ಮನೆಯು ಕಡ್ಡಾಯವಾಗಿ ಶೌಚಾಲಯ ನಿರ್ಮಿಸಿಕೊಳ್ಳಬೇಕು. ಸ್ವಚ್ಛಭಾರತ್ ಯೋಜನೆಹಾಗೂನರೇಗಾಯೋಜನೆಯಡಿ ಪ್ರತಿ ಮನೆಗೆ ಶೌಚಾಲಯ ನಿರ್ಮಾಣಕ್ಕೆ ಗ್ರಾಮ ಪಂಚಾಯತ ಕ್ರಮ ಕೈಗೊಳ್ಳುತ್ತಿದೆ. ಇದರ ಸದುಪಯೋಗ ಪಡೆದುಕೊಂಡು ಗ್ರಾಮವನ್ನು ಸ್ವಚ್ಛತೆ ಮಾಡಿದಾಗ ಮಹಾತ್ಮ ಗಾಂಧಿಜೀ ಅವರು ಕಂಡ ಗ್ರಾಮ ಸ್ವರಾಜ್ ಕನಸು ಈಡೇರುತ್ತದೆ ಎಂದು ತಾಲೂಕು ಪಂಚಾಯತಕಾರ್ಯನಿರ್ವಾಹಕಅಧಿಕಾರಿ ಎಸ್.ಕೆ.ಇನಾಮದಾರ ಹೇಳಿದರು.



ಜಿಲ್ಲಾ ಪಂಚಾಯತ ಮತ್ತು ತಾಲೂಕು ಪಂಚಾಯತ ನರಗುಂದ ಹಾಗೂ ಕನಕೀಕೊಪ್ಪ ಗ್ರಾಮ ಪಂಚಾಯತ ಸಂಯುಕ್ತಾಶ್ರಯದಲ್ಲಿ ಗ್ರಾಮದ ಎನ್.ಸಿ.ಕೆ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಡೆದ ಸ್ವಚ್ಛತಾ ಹೀ ಸೇವೆ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಗ್ರಾಮೀಣ ಪ್ರದೇಶದಲ್ಲಿ ಅಗತ್ಯತೆಗೆ ತಕ್ಕಷ್ಟೇ ಮಾತ್ರ ನೀರನ್ನು ಬಳಕೆ ಮಾಡಬೇಕು. ಅಗತ್ಯತೆ ಮೀರಿ ನೀರನ್ನು ಬಳಕೆ ಮಾಡಿ ಪೋ?ಲು ಮಾಡಿ ಹರಿಬಿಡುವುದರಿಂದ ಗ್ರಾಮದ ವಾತಾವರಣ ಮಲೀನತೆಗೆ ಕಾರಣವಾಗುತ್ತದೆ. ಇದರಿಂದ ಗ್ರಾಮದಲ್ಲಿ ಕೀಟಾಣುಗಳು ಉತ್ಪತ್ತಿಯಾಗಿ ಸಾಂಕ್ರಾಮಿಕ ರೋಗ ಹರಡಿ ಪರಿಸರ ಮಾಲಿನ್ಯತೆ ಉಂಟಾಗುತ್ತದೆ. ಆದ–ರಿಂದ ನೀರನ್ನು ಮಿತವಾಗಿ ಬಳಸಿ ಮಲ ವಿಸರ್ಜನೆಗೆ ಮನೆಯಲ್ಲಿ ಕಡ್ಡಾಯವಾಗಿ ಶೌಚಾಲಯವನ್ನು ನಿರ್ಮಿಸಿಕೊಳ್ಳಿ ಎಂದು ಶಾಲಾ ಮಕ್ಕಳಲ್ಲಿ ಶುಚಿತ್ವದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಶಾಲಾ ಹೆಣ್ಣು ಮಕ್ಕಳು ಬಂಗಾರ ಬೇಕು, ಬಟ್ಟೆ ಬೇಕು ಅಂತ ಹಠ ಮಾಡುವುದಕ್ಕಿಂತ ಮನೆಗೊಂದು ಶೌಚಾಲಯ ಕಟ್ಟಿಸಿ ಅಂತ ಪಾಲಕರಲ್ಲಿ ಹಠ ಮಾಡಿ. ಅಂ–ದಾಗ ಮನೆಗೊಂದು ಶೌಚಾಲಯ ನಿರ್ಮಾಣ ಸಾಧ್ಯವಾಗುತ್ತದೆ. ಈ ಮೂಲಕ ಬಯಲು ಮಲ ವಿಸರ್ಜನೆ ಮುಕ್ತ ಗ್ರಾಮಕ್ಕೆ ನೆರವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಪಂಚಾಯತ ಸಹಾಯಕನಿರ್ದೇಶಕರಾದಶ್ರೀಮತಿಕೃಣ್ಣಮ್ಮ ಹಾದಿಮನಿ,ಮಾತನಾಡಿ,ಸ್ವಚ್ಚತಾ ಹೀ ಸೇವಾ ಆಂದೋಲನವನ್ನು ಪ್ರತಿ ವರ್ಷದಂತೆ ಈ ವರ್ಷವೂ ಆಚರಣೆ ಮಾಡುತ್ತಿದ್ದು, ನಿರಂತರವಾಗಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ 15 ದಿನಗಳ ಕಾಲ ಸ್ವಚ್ಛತಾ ದೃಷ್ಟಿಯಿಂದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಶಾಲಾ ಮಕ್ಕಳಲ್ಲೂ ಶುಚಿತ್ವ ಜಾಗೃತಿಗಾಗಿ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಶಾರದಾ ಹಳೇಮನಿ ಮತ್ತು ಸಮುದಾಯ ಆರೋಗ್ಯಾಧಿಕಾರಿ ರವಿ ವಾಲ್ಮೀಕಿ ಮಾತನಾಡಿ, ವೈಯಕ್ತಿಕ ಸ್ವಚ್ಛತೆ ಹಾಗೂ ಶುಚಿತ್ವದಿಂದ ಕೈ ತೊಳೆಯುವ ವಿಧಾನದ ಬಗ್ಗೆ ಶಾಲಾ ಮಕ್ಕಳಲ್ಲಿ ತಿಳುವಳಿಕೆ ಮೂಡಿಸಿದರು.

ಕಾರ್ಯಕ್ರಮ ಬಳಿಕ ಶಾಲಾ ಮಕ್ಕಳಿಗೆ ಮತ್ತು ಕಾರ್ಯಕ್ರಮದಲ್ಲಿ ಅಧಿಕಾರಿಗಳಿಗೆ ಹಾಗೂ ಜನಪ್ರತಿನಿಧಿಗಳಿಗೆ ಶುಚಿತ್ವಕ್ಕಾಗಿ ಪ್ರತಿಜ್ಞಾವಿಧಿಯನ್ನು ತಾಲೂಕು ಪಂಚಾಯತ ಐಇಸಿ ಸಂಯೋಜಕರು ಸುರೇಶ ಬಾಳಿಕಾಯಿ ಭೋಧಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಉಪಾಧ್ಯಕ್ಷರಾದಶ್ರೀಮತಿಎಸ್,ಎ,ಬಡಿಗೇರ, ಗ್ರಾಮ ಪಂಚಾಯತ ಸದಸ್ಯರಾದ ಶ್ರೀಮತಿ ಎಮ್,ಎಸ್,ದೊಡಮನಿ, ಕನಕರೆಡ್ಡಿ ಗಿರಡ್ಡಿ, ಶ್ರೀಮತಿ ವೆಂಕಮ್ಮ ಮಾದರ,ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ರಮೇಶಗೌಡ ರಾಯನಗೌಡರ ,

ಮುಖ್ಯೋಪಾಧ್ಯಾಯರು ಶ್ರೀಮತಿ ಎಸ್.ಪಿ ಹಿರೇಮನಿ, ಕನಕಿಕೊಪ್ಪ ಹಾಗೂ ಗ್ರಾಮ ಪಂಚಾಯತ ಸಿಬ್ಬಂದಿ ವರ್ಗ ಮತ್ತು ಅಂಗನವಾಡಿ ಕಾರ್ಯಕರ್ತೆಯರು, ಸಂಜೀವಿನಿ ಒಕ್ಕೂಟದ ಮಹಿಳಾ ಸದಸ್ಯರು ಭಾಗವಹಿಸಿದ್ದರು.

# ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ



**ಧಾರವಾಡ :** ಹುಬ್ಬಳ್ಳಿ–ಧಾರವಾಡ ಪಶ್ಚಿಮ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಧಾರವಾಡ ಶಹರದ ವಾರ್ಡ್ ನಂ.23 ರಲ್ಲಿನ ಯಾಲಕ್ಕಿ ಶೆಟ್ಟರ್ ಕಾಲೋನಿಯ ಇಂದಿರಾ ನಗರ ಹಾಗೂ ಹೊಂಡದ ವೀರಭದ್ರೇಶ್ವರ ನಗರದ ಒಳ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಸಂಗಣ್ಣ ಹಿತ್ತಲಮನಿ, ರೂಪಾ ಈರೇಶನವರ್, ಸ್ವಪ್ನಿಲ್ ಸಾಬ್ಳೆ , ಸುಖದೇವ ಬಾಡಗಿ, ನೆಹರು ನಿಡವಣಿ, ಹಿರಿಯರಾದ ರಾಜು ಸೋಲಾಪುರಕರ, ಬಸಪ್ಪ ದೊಡ್ಡಮನಿ, ರಾಚಯ್ಯಾ ಮಠಪತಿ, ಯುವರಾಜ ಕಲಾಲ, ಶಂಕರ ದೇವರೆಡ್ಡಿ, ಕೃಷ್ಣ ಕುಲಕರ್ಣಿ, ಗೀರೀಶ ಮುದಕವಿ, ಸುವರ್ಣ ವಾಲಿ, ರೇಣುಕಾ ಆಲದಮರದ,

ಸುಧಾ ಕಲಾಲ, ಸಾಧನಾ ಸೋಲಾಪುರಕರ, ಪುಷ್ಪಾ ಕೋಟಬಾಗಿ ಸೇರಿದಂತೆ ಇನ್ನಿತರರು ಹಾಗೂ ಸ್ಥಳೀಯ ನಾಗರಿಕರು ಉಪಸ್ಥಿತರಿದ್ದರು.

# ಕರುನಾಡು ಯುವ ಜನವೇದಿಕೆ ನೂತನ ತಾಲ್ಲೂಕು ಅಧ್ಯಕ್ಷರ ಆಯ್ಕೆ




**ಕೃಷ್ಣರಾಜಪೇಟೆ :** ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರುನಾಡು ಯುವಜನ ವೇದಿಕೆಯ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಟಿ.ಸಿ.ಶ್ರೀನಿವಾಸ್ ರವರ ಆದೇಶದಂತೆ, ಮಂಡ್ಯ ಜಿಲ್ಲಾ ಗೌರವಾಧ್ಯಕ್ಷರಾದ ಕೆಬಿಸಿ ಮಂಜುನಾಥ್ ರವರ ಮಾರ್ಗದರ್ಶನದಲ್ಲಿ, ಜಿಲ್ಲಾಧ್ಯಕ್ಷರಾದ ಎಸ್.ರವಿ ರವರ ನೇತೃತ್ವದಲ್ಲಿ ಸಭೆ ನೆಡೆಸಲಾಯಿತು,

ಕರುನಾಡು ಯುವಜನ ವೇದಿಕೆ ಕೃಷ್ಣರಾಜಪೇಟೆ ತಾಲೋಕಿನಲ್ಲಿ ರಚನೆಯಾಗಿ ಒಂದು ವರ್ಷ ಪೂರೈಸಿದ ಹಿನ್ನಲೆಯಲ್ಲಿ ತಾಲ್ಲೂಕು ಅಧ್ಯಕ್ಷರಾದ ಯುವರಾಜ್ ರವರನ್ನು ಜಿಲ್ಲಾ ಉಪಾಧ್ಯಕ್ಷರಾಗಿ, ನೂತನ ತಾಲ್ಲೂಕು ಅಧ್ಯಕ್ಷರಾಗಿ ಶ್ಯಾಮ್ ಸುಂದರ್, ಕಾರ್ಯಾಧ್ಯಕ್ಷರಾಗಿ ಸುನೀಲ್ ಕುಮಾರ್ ಹಾಗೂ ಮಹಿಳಾ ತಾಲ್ಲೂಕು ಅಧ್ಯಕ್ಷರಾಗಿ ಧನಲಕ್ಷ್ಮೀ ರವರನ್ನು ಅಧಿಕೃತ ಜಿಲ್ಲಾಧ್ಯಕ್ಷರಾದ ಎಸ್.ರವಿ ರವರು ಆಯ್ಕೆ ಮಾಡಿದರು,

ನಂತರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಉಪಾಧ್ಯಕ್ಷರಾದ ಜಿ.ಪಿ.ರಾಜು ರವರು ಸಂಘಟನೆಯ ಅಧ್ಯಕ್ಷರುಪದಾಧಿಕಾರಿಗಳುಸಾಮಾಜಿಕಕಾಳಜಿಯನ್ನು ಬೆಳೆಸಿಕೊಂಡು ಸಮಾಜಮುಖಿ ಕೆಲಸಗಳನ್ನು ಮಾಡಲು ಶ್ರಮಿಸಬೇಕೆಂದು ತಿಳಿಸಿ ನೂತನವಾಗಿ ಆಯ್ಕೆಯಾದ ಅಧ್ಯಕ್ಷರು ಹಾಗೂ ಸೇರ್ಪಡೆಗೊಂಡ ಪದಾಧಿಕಾರಿಗಳಿಗೆ ಶುಭ ಕೋರಿದರು,

ಈ ಸಂದರ್ಭದಲ್ಲಿ ಕರುನಾಡು ಯುವಜನ ವೇದಿಕೆಯ ರಾಜ್ಯ ಉಪಾಧ್ಯಕ್ಷರಾದ ಲೋಕೇಶ್.ವಿ, ಜಿಲ್ಲಾಧ್ಯಕ್ಷರಾದ ಎಸ್.ರವಿ, ಜಿಲ್ಲಾ ಉಪಾಧ್ಯಕ್ಷರಾದ ಜಿ.ಪಿ.ರಾಜು, ನೂತನವಾಗಿ ಆಯ್ಕೆಯಾದ ಜಿಲ್ಲಾ ಉಪಾಧ್ಯಕ್ಷರಾದ ಯುವರಾಜ್,ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷರಾದ ಸಾಯಿಕುಮಾರ್, ನೂತನ ತಾಲ್ಲೋಕು ಅಧ್ಯಕ್ಷರಾದ ಶ್ಯಾಮ್ ಸುಂದರ್, ಮಹಿಳಾ ತಾಲ್ಲೂಕು ಅಧ್ಯಕ್ಷರಾದ ಧನಲಕ್ಷ್ಮೀ, ಕಾರ್ಯಾಧ್ಯಕ್ಷರಾದ ಸುನೀಲ್ ಕುಮಾರ್, ಸುಂದರೇಶ್, ಲಕ್ಷ್ಮೀ, ಯೋಗೇಶ್, ಪವನ್,ಶಶಿ ಕುಮಾರ್, ರಂಗನಾಥ್ ಸೇರಿದಂತೆ ಮತ್ತಿತರು ಭಾಗವಹಿಸಿದ್ದರು.

# ಧಾರವಾಡ: ವಿಶ್ವಕರ್ಮ ಜಯಂತೋತ್ಸವ

**ಧಾರವಾಡ :** ಜಿಲ್ಲಾ ಹುಬ್ಬಳ್ಳಿ ತಾಲೂಕ ವತಿಯಿಂದ ತಾಲೂಕು ಆಡಳಿತ ಸೌದದಲ್ಲಿ ಶ್ರೀ ವಿಶ್ವಕರ್ಮ ಪೂಜಾ ಜಯಂತೋತ್ಸವ ವಿಜೃಂಭಣೆಯಿಂದ ಆಚರಿಸಲಾಯಿತು ಕಾರ್ಯಕ್ರಮದಲ್ಲಿ ಧಾರವಾಡ ಜಿಲ್ಲಾ ಮಹಾಪೌರ ರಾದ ರಾಮಪ್ಪ ಕೃಷ್ಣಪ್ಪ ಬಡಿಗೇರ್, ಹುಬ್ಬಳ್ಳಿ ನಗರ ತಹಸೀಲ್ದಾರ್ ಎ. ಗಿ. ಪಾಟೀಲ್, ಗ್ರಾಮೀಣ ತಹಸೀಲ್ದಾರ್ ಶಿವಾನಂದ ಹೆಬ್ಬಳ್ಳಿ, ಃಇಔ ಉಮೇಶ ಬೊಮ್ಮಕ್ಕನವರ ದೀಪ ಬೆಳಗುವ ಮೂಲಕ ಚಾಲನೆ ನೀಡಿದರು. ವಿಶ್ವಕರ್ಮ ಇತಿಹಾಸ ಉಪನ್ಯಾಸವನ್ನು ಸಮಾಜದ ಶ್ರೀಮತಿ ಶಾರದಾ ರಿ ಬಡಿಗೇರ್ ಅವರು ನೀಡಿದರು.

ಹುಬ್ಬಳ್ಳಿ ನಗರ ಮಹಿಳಾ ಘಟಕ ಘೋಷಣೆ ಮಾಡಿ ಮಹಾಪೌರರು ಉದ್ಘಾಟನೆ ಮಾಡಿದರು.ˏಟಣ ಭಾರತಿ ರವೀಂದ್ರ ಆಚಾರ್ಯ, ಅಧ್ಯಕ್ಸರಾಗಿ ಆಯ್ಕೆಗೊಂಡರು.

ತಾಲೂಕ ಆಡಳಿತದಿಂದ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಯಿತು.



ಕಾರ್ಯಕ್ರಮದಲ್ಲಿ ಸಮಾಜದಿಂದ ತಾಲೂಕ ಉಪಾಧ್ಯಕ್ಷರು ಬಲಭಿಮಾ ಪೊ?ದರ್, ಗಿರೀಶ್ ಬಡಿಗೇರ್, ಶಿವರುದ್ರಪ್ಪ ಬಡಿಗೇರ್,ಖ ಏ ಪತ್ತಾರ್ ನರಸಿಂಹ ಜವಳಿ ಹೋಳಿ, ಮೌನೇಶ್ ಪತ್ತಾರ್, ಪರಮೇಶ ಪತ್ತಾರ್, ಶಾಮ್ ಬಡಿಗೇರ್, ಮಹಿಳಾ ಹಿರಿಯ ಸದಸ್ಯರುಗಳಾದ ˏಟಣ ಲಕ್ಷ್ಮೀ ರಾಮಣ್ಣ ಬಡಿಗೇರ್, ಭಾರತಿ ಪತ್ತಾರ್, ರೇಖಾ ಬಡಿಗೇರ್, ಶಾರದಾಬಡಿಗೇರ್,ಮೀನಾಕ್ಷಿ ಬಡಿಗೇರ್,ದಿವ್ಯ ಅರ್ಕಸಲಿ,ದೇವಕ್ಕ ಬಡಿಗೇರ್, ನಂದಿನಿ ಅರ್ಕಸಲಿ ಉಪಸ್ಥಿತರಿದ್ದರು.

ಉಪಾಧ್ಯಕ್ಷ ಬಲಭಿಮ ಪೊ?ಡ್ಡರ್ ಗಣ್ಯರನ್ನು ಸ್ವಾಗತಿಸಿದರು. ಆಡಿ ರವೀಂದ್ರ ಆಚಾರ್ಯ ಕಾರ್ಯಕ್ರಮ ನಿರೂಪಣೆ ಮಾಡಿದರು. ಮಹೇಶ್ ಪತ್ತಾರ್ ಅವರು ವಂದನಾರ್ಪಣೆ ಮಾಡಿದರು.

# ಉದ್ಯಮಿಗಳಾಗಲು ಕೌಶಲ್ಯಾಧಾರಿತ ಶಿಕ್ಷಣ ಹಾಗೂ ಪ್ರೋತ್ಸಾಹ ಅಗತ್ಯ: ಮಾಜಿ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ

## ಎಫ್‌ಕೆಸಿಸಿಐ ಮಂಥನ್ – 2024 ರ ಪ್ರಶಸ್ತಿ ಪ್ರಧಾನ | ರಾಜ್ಯದ ವಿವಿಧ ಕಾಲೇಜುಗಳ 395 ತಂಡಗಳು ಭಾಗಿ | ಉಡುಪಿಯ ಮಣೀಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ತಂಡಕ್ಕೆ ಮೊದಲ ಬಹುಮಾನ

**ಬೆಂಗಳೂರು :** ಹೆಚ್ಚಿನ ಯುವ ಜನತೆ ಉದ್ಯಮಗಳನ್ನು ಪ್ರಾರಂಭಿಸಿ ಉದ್ಯಮಿಗಳಾಗಲು ಕೌಶಲ್ಯಾಧಾರಿತ ಶಿಕ್ಷಣ ಹಾಗೂ ಪ್ರೋತ್ಸಾಹ ಬಹಳ ಅಗತ್ಯ ಎಂದು ಮಾಜಿ ಕೈಗಾರಿಕಾ ಸಚಿವರಾದ ಮುರುಗೇಶ್ ನಿರಾಣಿ ತಿಳಿಸಿದರು.

ಎಫ್‌ಕೆಸಿಸಿಐ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಮಂಥನ್ – 2024 ರ ಕಾರ್ಯಕ್ರಮದಲ್ಲಿ ವಿಜೇತ ತಂಡಗಳಿಗೆ ಪ್ರಶಸ್ತಿ ಹಾಗೂಬಹುಮಾನವಿತರಿಸಿಮಾತನಾಡಿದರು.

ನಮ್ಮ ದೇಶ ಹಾಗೂ ರಾಜ್ಯದಲ್ಲಿ ಕೈಗಾ–ರಿಕೆಗಳು ಹಾಗೂ ಉದ್ಯಮಗಳ ಬೆಳವಣಿಗೆಗೆ ಪೂರಕವಾದ ವಾತಾವರಣವಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಹೊಸ ಉದ್ದಿಮೆಗಳ ಸ್ಥಾಪನೆಗೆ ಹಾಗೂ ಇರುವಂತಹ ಉದ್ದಿಮೆಗಳ ಅಭಿವೃದ್ದಿಗೆ ಹೆಚ್ಚಿನ ಆದ್ಯತೆ ನೀಡುತ್ತಿವೆ. ಇಂತಹ ಸಂಧರ್ಭದಲ್ಲಿ ನಮ್ಮ ಯುವ ಜನತೆ ತಮ್ಮದೇ ಆದ ಉದ್ದಿಮೆಗಳ ಸ್ಥಾಪನೆ ಹಾಗೂ ಉದ್ಯೋಗಾವಕಾಶಗಳ ನಿರ್ಮಾಣಕ್ಕೆ ಮುಂದಾಗಬೇಕು. ಇದಕ್ಕೆ ನಮ್ಮ ಶಿಕ್ಷಣ ಪದ್ದತಿಯಲ್ಲಿ ಕೌಶಲ್ಯದ ಅಳವಡಿಕೆ ಹಾಗೂ ಸ್ವಂತ ಉದ್ಯಮ ಪ್ರಾರಂಭಿಸಲು ಅಗತ್ಯ ಪ್ರೋತ್ಸಾಹ ನೀಡಬೇಕಾದ ಅಗತ್ಯವಿದೆ.

ಎಫ್‌ಕೆಸಿಸಿಐ ಕೈಗೊಂಡಿರುವ ಮಂಥ–ʼನ್ ಕಾರ್ಯಕ್ರಮ ಹೊಸ ಆವಿಷ್ಕಾರಗಳು, ಸಂಶೋಧನೆಗಳನ್ನ ಕೈಗೊಂಡು ಬೆರಗು ಮೂಡಿಸುತ್ತಿರುವ ಪ್ರತಿಭಾನ್ವಿತರಿಗೆ ಸೂಕ್ತ ವೇದಿಕೆ ಕಲ್ಪಿಸುತ್ತಿದೆ. ಅಲ್ಲದೇ, ಪರಿಣಿತ ಕೈಗಾ–ರಿಕೋದ್ಯಮಿಗಳು ಅವರಿಗೆ ಮಾರ್ಗದರ್ಶನ ಮಾಡುವ ಪರಿಕಲ್ಪನೆ ಬಹಳ ವಿನೂತನವಾಗಿದೆ. ಈ ಸ್ಪರ್ಧೆಯಲ್ಲಿ ಪಾಲ್ಗೊಂಡು ಗೆಲುವು ಸಾಧಿಸಿದ ವಿದ್ಯಾರ್ಥಿಗಳು ಅಷ್ಟೇ ಅಲ್ಲದೇ, ಪಾಲ್ಗೊಂಡ ಎಲ್ಲರೂ ಕೂಡಾ ಸ್ವಂತ ಬಲದ ಮೇಲೆ ಹೊಸ ಉದ್ಯಮ ಪ್ರಾರಂಭಿಸುವ ತಮ್ಮ ಕನಸು ನನಸಾಗುವಂತೆ ಪ್ರಯತ್ನಪಡಬೇಕು ಎಂದು ಹೇಳಿದರು.




ಎಫ್‌ಕೆಸಿಸಿಐ ಅಧ್ಯಕ್ಷರಾದ ರಮೇಶ್ ಚಂದ್ರ ಲಹೋಟಿ ಮಾತನಾಡಿ, ಪ್ರಸಕ್ತ ಸಾಲಿನ ಮಂಥನ್ – 2024 ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ಭಾಗಗಳ 395 ತಂಡಗಳು ಭಾಗಿಯಾಗಿ ತಮ್ಮ ಯೋಜನೆಯನ್ನ ನಮ್ಮ ಮುಂದೆ ಪ್ರಸ್ತುತಪಡಿಸಿವೆ. ಮಂಥನ್ ಕೇವಲ ಸ್ಪರ್ಧೆಯಲ್ಲ, ಮುಂದಿನ ಪೀಳಿಗೆಯ ಉದ್ಯಮಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಕಾರ್ಯಕ್ರಮವಾಗಿದೆ. ಎಫ್‌ಕೆಸಿಸಿಐ ಪ್ರಸ್ತಾವನೆ ರೂಪಿಸುವ ನಿಟ್ಟಿನಲ್ಲಿ ಪಾಲ್ಗೊಂಡ ತಂಡಗಳಿಗೆ ಮಾರ್ಗದರ್ಶನ ನೀಡಿತ್ತು. ತಮ್ಮ ಯೋಜನೆಯನ್ನ ಉದ್ದಿಮೆಯಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಬೇಕಾದಂತಹ ಕೌಶಲ್ಯ ಹಾಗೂ ತಂತ್ರಗಳ ಬಗ್ಗೆ ಅವರಲ್ಲಿ ತಿಳುವಳಿಕೆ ನೀಡಲಾಯಿತು. ಮುಂದಿನ ದಿನಗಳಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳು ಯಶಸ್ವಿ ಉದ್ದಿಮೆದಾರರಾಗಲಿ ಎನ್ನುವುದು ನಮ್ಮ ಉದ್ದೇಶವಾಗಿದೆ. ಯುವ ಉದ್ದಿಮೆದಾರ–ರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕರ್ನಾಟಕ ಸರಕಾರ ನಮ್ಮ ಎಲ್ಲಾ ಸಲಹೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದೆ ಎಂದರು.

ಪ್ರಥಮ ಸ್ಥಾನ ಪಡೆದ ಉಡುಪಿಯ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶ್ ತಂಡಕ್ಕೆ ಮೂರು ಲಕ್ಷ ರೂಪಾಯಿಗಳ ನಗದು ಹಾಗೂ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎರಡನೇ ಸ್ಥಾನ ಪಡೆದ ಧಾರವಾಡ ಕೃಷಿ ವಿಶ್ವವಿದ್ಯಾಲಯದಮಹಿಳಾತಂಡಕ್ಕೆಒಂದುವರೆ ಲಕ್ಷ ರೂಪಾಯಿಗಳ ನಗದು, ಮೂರನೇ ಸ್ಥಾನ ಪಡೆದ ಬೆಂಗಳೂರಿನ ಶೇಷಾದ್ರಿಪುರಂ ಪೋಸ್ಟ್ ಗ್ರಾಜುಯೇಟ್ ಡಿಪಾರ್ಟ್‌ಮೆಂಟ್ ಆಫ್ ಕಾಮರ್ಸ್ ತಂಡಕ್ಕೆ ಒಂದು ಲಕ್ಷ ರೂಪಾಯಿಗಳ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಬಿಎಂಎಸ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಹಾಗೂ ಮ್ಯಾನೇಜ್‌ಮೆಂಟ್ ನ ತಂಡಕ್ಕೆ ನಾಲ್ಕನೇ ಸ್ಥಾನ, ಆರ್‌ವಿ ವಿಶ್ವವಿದ್ಯಾಲಯದ ತಂಡ ಐದನೇ ಸ್ಥಾನ, ಪಿಇಎಸ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯ ತಂಡಕ್ಕೆ ಆರನೇ ಸ್ಥಾನ, ಸಿಎಂಆರ್ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿಯ ತಂಡ ಏಳನೇ ಸ್ಥಾನ, ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನೀಯರಿಂಗ್‌ನ ತಂಡ ಎಂಟನೇ ಸ್ಥಾನ, ಜೆಎಸ್‌ಎಸ್ ಅಕಾಡೆಮಿ ಆಫ್ ಟೆಕ್ನಾಲ–ಜಿಯ ತಂಡ ಒಂಬತ್ತನೇ ಸ್ಥಾನ ಹಾಗೂ ಕೃಷಿ ಕಾಲೇಜು ಧಾರವಾಡದ ವಿದ್ಯಾರ್ಥಿಗಳ ತಂಡ ಹತ್ತನೇ ಸ್ಥಾನ ಪಡೆದುಕೊಂಡಿವೆ. ಆಯ್ಕೆಯಾದ ಎಲ್ಲಾ ತಂಡಗಳಿಗೂ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಪಾಸ್ಟ್ ಪ್ರೆಸಿಡೆಂಟ್ ಡಿ ಮುರಳಿಧರ್, ಪ್ರೆಸಿಡೆಂಟ್ ಎಲೆಕ್ಟ್ ಎಂ.ಜಿ ಬಾಲಕೃಷ್ಣ, ಹಿರಿಯ ಉಪಾಧ್ಯಕ್ಷರಾದ ಉಮಾ ರೆಡ್ಡಿ, ಮಂಥನ್ – 2024 ರ ಅಧ್ಯಕ್ಷರಾದ ಕೀರ್ತನ್ ಕುಮಾರ್ ಎಂ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು, ನೌಕರರು ಮತ್ತು ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟ ಹಾಗೂ ಎಲ್ಲಾ ವೃಂದ ಸಂಘಗಳ ಸಭೆ

**ಬೆಂಗಳೂರು:**ರಾಜ್ಯದಶೇಕಡ70ಜನಸಮೂಹಕ್ಕೆ ಸೇವೆ ಒದಗಿಸುತ್ತಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧಿಕಾರಿಗಳು ಮತ್ತು ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸದಿದ್ದರೆ ಗಾಂಧಿ ಜಯಂತಿ ದಿನವಾದ ಅಕ್ಟೋಬರ್ 4 ರಿಂದ ಗ್ರಾಮ ಪಂಚಾಯತ್ ಸೇವೆಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಹೋರಾಟ ಮಾಡುವುದಾಗಿ ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾ–ರಿಗಳ ಕ್ಷೇಮಾಭಿವೃದ್ಧಿ ಹಾಗೂ ಸಂಬಂಧಪಟ್ಟ ಸಂಘಟನೆಗಳು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿವೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾ–ರಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜು ವಾರದ, ಗ್ರಾಮ ಪಂಚಾಯತ್ ಸದಸ್ಯರ ಒಕ್ಕೂಟದ ರಾಜ್ಯಾಧ್ಯಕ್ಷ ಕಾಡಶೆಟ್ಟಿ ಹಳ್ಳಿ ಸತೀಶ್, ಪತ್ರಾಂಕಿತ ಅಧಿಕಾರಿಗಳ ಸಂಘದ ಅಧ್ಯಕ್ಷ ಡಿ.ಎ. ರಮೇಶ್ ಮತ್ತಿತರರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವಂತೆ ಮಾಡಿದ ಮನವಿಗಳಿಗೆ ಸೂಕ್ತ ಸ್ಪಂದನೆ ದೊರೆತಿಲ್ಲ. ಆದರೆ ಎಲ್ಲಾ ಸಮಸ್ಯೆಗಳಿಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಗಳನ್ನೇ ಹೊಣೆ ಮಾಡಲಾಗುತ್ತಿದೆ. ಈ ಧೋರಣೆಯನ್ನು ಖಂಡಿಸಿ ಹೋರಾಟ ಮಾಡುತ್ತೇವೆ ಎಂದರು.

ಪಂಚಾಯತ್ ಗಳ ಜನಸಂಖ್ಯೆ ಎರಡರಿಂದ ಮೂರು ಪಟ್ಟು ಹೆಚ್ಚಾಗಿದ್ದರೂ 30 ವರ್ಷಗಳ ಹಿಂದಿನಂತೆ ಸಿಬ್ಬಂದಿ ಹೊಂದಿದ್ದು, ಇದರಿಂದ ಎಲ್ಲಾ ಹೊರೆ ನಮ್ಮ ಮೇಲೆ ಬೀಳುತ್ತಿದೆ. ದಿನದಿಂದ ದಿನಕ್ಕೆ ಕೆಲಸದ ಒತ್ತಡ ತೀವ್ರಗೊಳ್ಳುತ್ತಿದೆ. ಮೂರು ವರ್ಷಗಳಿಂದ ಖಾಲಿಯಾಗಿರುವ ಪಂಚಾಯತ್ ಸಿಬ್ಬಂದಿಯನ್ನು ಭರ್ತಿ ಮಾಡಿಕೊಂಡಿಲ್ಲ. ಕಾರ್ಯದರ್ಶಿ ಮತ್ತು ಲೆಕ್ಕ ಪರಿಶೋಧಕರ ಹುದ್ದೆಗಳು ಖಾಲಿ ಇವೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವಾಗ ಪಿಡಿಒಗಳ ಸಲಹೆಗಳನ್ನು ಪರಿಗಣಿಸಿಲ್ಲ. ಅವೈಜ್ಞಾನಿಕ ನಿಯಮಗಳನ್ನು ಅಳವಡಿಸಲಾಗಿದೆ. ಕುಂದುಕೊರತೆ ಪ್ರಾಧಿಕಾರವನ್ನು ನೆಪಮಾತ್ರಕ್ಕೆ ರಚಿಸಿ ಕೈಬಿಡಲಾಗಿದೆ. ನಮ್ಮ ಅಹವಾಲುಗಳಿಗೆ ಮನ್ನಣೆ ದೊರೆಯುತ್ತಿಲ್ಲ ಎಂದರು.



ಎಲ್ಲಾ ಪಿಡಿಒ ಹುದ್ದೆಗಳನ್ನು ಗೆಜೆಟೆಡ್ ಬಿ ಗುಂಪಿಗೆ ಉನ್ನತೀಕರಣ ಮಾಡಬೇಕು. ಒಂದೇ ತಾಲ್ಲೂಕಿನಲ್ಲಿ 7 ವರ್ಷ ಸೇವೆ ಸಲ್ಲಿಸಿದವರನ್ನು ವರ್ಗಾವಣೆ ಮಾಡುವ ನಿಯಮವನ್ನು ಬಲವಂತವಾಗಿಹೇರಲಾಗಿದೆ.ಸರ್ಕಾರದಒತ್ತಡ ಕಾರ್ಯತಂತ್ರದ ಪರಿಣಾಮ 21 ಪಿಡಿಒಗಳು ಇತ್ತೀಚೆಗೆ ಜೀವ ಕಳೆದುಕೊಂಡಿದ್ದಾರೆ. ಸಾಕಷ್ಟು ಆರೋಗ್ಯ ಸಮಸ್ಯೆಗಳಿಗೆ ಸಿಲುಕಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು. ಹಾಗೂ ಜಿಲ್ಲೆಯಲ್ಲಿ ಪಿಡಿಓಗಳ ಇಚ್ಛೆ ಇಲ್ಲದೆ ಬಲವಂತವಾಗಿ ಸಾರ್ವಜನಿಕ ಹಿತಾಸಕ್ತಿ ಹೆಸರಿನಲ್ಲಿ ವರ್ಗಾವಣೆ ಮಾಡುವುದನ್ನ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ವರ್ಗಾವಣೆ ನಿಯಮಗಳಲ್ಲಿ ಬದಲಾವಣೆಗೂ ಮುನ್ನ ಸಂಘದ ಸಲಹೆ ಪಡೆಯಬೇಕು. 7 ವರ್ಷ ಪೂರ್ಣಗೊಂಡಿರುವವರನ್ನು ವರ್ಗಾವಣೆ ಮಾಡುವುದನ್ನು ಕೈಬಿಡಬೇಕು. ಪಂಚಾಯತ್ ಗಳಿಗೆ ಅಗತ್ಯ ಪೂರಕ ಸಿಬ್ಬಂದಿಯನ್ನು ನೇಮಿಸಬೇಕು. ಪಿಡಿಒ ಜೇಷ್ಠತಾ ಪಟ್ಟಿ ಅಂತಿಮಗೊಳಿಸಿ ಆದ–ʼೇಶ ಹೊರಡಿಸಬೇಕು. ಪೊಲೀಸ್ ಇಲಾಖೆ ಮಾದರಿಯಲ್ಲಿ ಕುಂದುಕೊರತೆ ಪ್ರಾಧಿಕಾರ ಸ್ಥಾಪಿಸಬೇಕು. ಕಾರ್ಯದರ್ಶಿ ಗ್ರೇಡ್ 1 ರಿಂದ ಪಿಡಿಒ ಆಗಿ ಮುಂಬಡ್ತಿ ನೀಡಲು ವಿಳಂಬವಾಗಿದ್ದು, ಇದರಿಂದ ಒಂದು ಸಾವಿರಕ್ಕೂ ಅಧಿಕ ನೌಕರರು ಮುಂಬಡ್ತಿ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಈ ವಲಯದ ಮುಂಬಡ್ತಿ ಅನುಪಾತವನ್ನು ಶೇ 35 ರಿಂದ ಶೇ 60ಕ್ಕೆ ಹೆಚ್ಚಿಸಬೇಕು. ಈ ಪ್ರಕ್ರಿಯೆ ಜಿಲ್ಲಾ ಮಟ್ಟದಲ್ಲೇ ಆಗಬೇಕು ಎಂದರು.

ದ್ವಿತಿಯ ದರ್ಜೆ ಲೆಕ್ಕ ಸಹಾಯಕರನ್ನು ಪ್ರಥಮದರ್ಜೆಲೆಕ್ಕಸಹಾಯಕರನ್ನಾಗಿ ಗ್ರೇಡ್ 1 ಗ್ರಾಮ ಪಂಚಾಯತ್ ಗಳಲ್ಲಿ ಮುಂಬಡ್ತಿ ನೀಡಬೇಕು. ದ್ವಿತಿಯ ದರ್ಜೆ ಲೆಕ್ಕ ಸಹಾಯಕ–ರಿಗೆ ಮುಂಬಡ್ತಿ ನೀಡಬೇಕು. ಹತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ದ್ವಿತಿಯ ದರ್ಜೆ ಲೆಕ್ಕ ಸಹಾಯಕರನ್ನು ಒಂದು ಬಾರಿಗೆ ಅನ್ವಯವಾಗುವಂತೆ ಶೇ 100 ರಷ್ಟು ಗ್ರೇಡ್ 1 ಕಾರ್ಯದರ್ಶಿ ಹುದ್ದೆಗೆ ಮುಂಬಡ್ತಿ ನೀಡಬೇಕು. ಕರವಸೂಲಿಗಾರರು, ಡಾಟಾ ಎಂಟ್ರಿ ಆಪರೇಟರ್, ನೀರು ಗಂಟಿ, ಜವಾನರು, ಸ್ವಚ್ಛತಾ ಕೆಲಸಗಾರರಿಗೆ ನಿವೃತ್ತಿಗೆ 5 ವರ್ಷಗಳಿಗೂ ಮುನ್ನ ಗ್ರೇಡ್ 2 ಕಾರ್ಯದರ್ಶಿ ಸಮಾನಂತರ ವೇತನ ಶ್ರೇಣಿ ನಿಗದಿ ಮಾಡಬೇಕು. ಗ್ರೇಡ್ 1 ಕಾರ್ಯದರ್ಶಿ ಹುದ್ದೆಯ ಕೋಟ ಶೇ 70 ರಷ್ಟು ಹೆಚ್ಚಿಸಬೇಕು. ಎಲ್ಲಾ ಪಂಚಾಯತ್ ಗಳಿಗೆ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಗಳ ಮಂಜೂರು ಮಾಡಬೇಕು ಎಂದರು.

ಪಂಚಾಯತ್ ಗಳಿಗೆ ಜವಾಬ್ದಾರಿ ನಕ್ಷೆ ಅಧಿಕಾರ, ಕಚೇರಿ ನಿರ್ವಹಣಾ ಕೈಪಿಡಿ, ಸ್ಥಾಯಿ ಸಮಿತಿಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುವಂತೆ ನಿಯಮ ರೂಪಿಸಬೇಕು. ಕೆಡಿಪಿ ಸಭೆಗಳನ್ನು ಶಾಸನಬದ್ಧಗೊಳಿಸಬೇಕು. ಗ್ರಾಮ ಪಂಚಾಯತ್ ಪ್ರತಿನಿಧಿಗಳನ್ನು ಶಿಷ್ಟಾಚಾರದ ವ್ಯಾಪ್ತಿಗೆ ತರಬೇಕು.

ಇವರಿಗೆ ಪಿಂಚಣಿ, ಉಚಿತ ಬಸ್ ಸೌಲಭ್ಯ ಕಲ್ಪಿಸಬೇಕು. ಪಂಚಾಯತ್ ಗಳಿಗೆ ಪ್ರತ್ಯೇಕ ಲಾಂಛನ ಸೃಜಿಸಿ ಬಳಕೆಗೆ ಅನುಮತಿ ಕೊಡಬೇಕು. ಜಿಲ್ಲಾ ಪಂಚಾಯತ್ ನ ಸಿಇಒ ಹುದ್ದೆಗಳಲ್ಲಿ ಶೇ 33 ರಷ್ಟು ಇಲಾಖಾ ಅಧಿಕಾ–ರಿಗಳಿಗೆ ಮೀಸಲಿಡಬೇಕು. ಉಪ ಕಾರ್ಯದರ್ಶಿ ಹುದ್ದೆಯನ್ನು ಜಂಟಿ ಕಾರ್ಯದರ್ಶಿ ಎಂದು ಪದನಾಮ ಮಾಡಬೇಕು. ಕಾರ್ಯ ಒತ್ತಡ ತಗ್ಗಿಸಲು ಹೆಚ್ಚುವರಿ ಅಧಿಕಾರಿಗಳನ್ನು ನಿಯೋಜಿಸಬೇಕು ಎಂದು ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಗ್ರೇಡ್ 2 ಕಾರ್ಯದರ್ಶಿಗಳ ಸಂಘದ ಅಧ್ಯಕ್ಷ ಜಗದೀಶ್ ಮಣ್ಣನವರ್, ಲೆಕ್ಕ ಸಹಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಮಹಾಂತೇಶ್ ಖೋತಾ, ಡಾಟಾ ಎಂಟ್ರಿ ಆಪರೇಟರ್ ಸಂಘದ ಅಧ್ಯಕ್ಷ ಭೀಮರೆಡ್ಡಿ ಪಾಟೀಲ್, ಕರವಸೂಲಿಗಾರರ ಸಂಘದ ಅಧ್ಯಕ್ಷ ಎಚ್. ಲಿಂಗೇಶ್, ನೀರಗಂಟಿ ವೃಂದ ಸಂಘದ ಅಧ್ಯಕ್ಷ ರಾಮಕೃಷ್ಣಪ್ಪ, ಜವಾನರ ಸಂಘದ ಅಧ್ಯಕ್ಷ ರಾಜೇಶಖರ್, ಸ್ವಚ್ಛತಾಗಾರರ ವೃಂದ ಸಂಘದ ಅಧ್ಯಕ್ಷ ಬಿ.ಎ. ನಿತೀನ್ ಮತ್ತಿತರರು ಉಪಸ್ಥಿತರಿದ್ದರು.

# ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ



**ಬಾಗಲಕೋಟೆ :** ನವನಗರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ ಚಾಲನೆ ನೀಡಿದರು.

ನವನಗರದ ಮನೆ ಮನೆಗೆ ತೆರಳಿ ಬಿಜೆಪಿ ಸದಸ್ಯತ್ವ ನೊಂದಣಿ ಮಾಡಿಸಿದರು. ಮತಕ್ಷೇತ್ರದಲ್ಲಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ಅಭಿಯಾನದಲ್ಲಿ ಪಾಲ್ಗೊಂಡು ನಿಗದಿತ ಗುರಿಯನ್ನು ತಲುಪಬೇಕು ಎಂದು ಹೇಳಿದರು. ಬಾಗಲಕೋಟೆ ಸಮೀಪದ ಹೊನ್ನಾಕಟ್ಟಿ ಗ್ರಾಮದಲ್ಲಿ ಡಾ. ಶೇಖರ ಮಾನೆ ನೇತೃತ್ವದಲ್ಲಿ ಮನೆ ಮನೆಗೆ ಭೇಟಿ ನೀಡಿ ಸದಸ್ಯರನ್ನು ನೋಂದಾಯಿಸಿದರು. ಬಿಜೆಪಿ ಮುಖಂಡರಾದ ಕುಮಾರ ಗಿರಿಜಾ, ವಿರೂಪಾಕ್ಷ ಅಮೃತಕರ, ರಾಘು ನಾಗೂರ, ಗಣಪತಿ ದೂದಾನಿ, ಸುಧೀರ ಜಾಧವ, ಅಶೋಕ ಘಾಟಗೆ, ವಾಸು ಜಾಧವ, ತುಕಾರಾಮ ಗಲಗಲಿ, ಜ್ಯೋತಿಬಾ ಸೂರ್ಯವಂಶಿ, ಸಂತೋಷ ಜಾಧವ, ಶ್ರೀಶೈಲ ದೊಡ್ಡಮನಿ, ಬಸು ದಮ್ಮೂರ ಸೇರಿದಂತೆ ಅನೇಕರು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

# ತಂದೆ ಇಲ್ಲದ ಮಗುಗೆ ದುಡ್ಡು: ಮಧ್ಯವರ್ತಿಗಳಿಂದ ಸುಲಿಗೆ ಸದ್ದು

**ಬಾಗಲಕೋಟೆ :** ತಂದೆ ಇಲ್ಲದ ಮಕ್ಕಳ ಖಾತೆಗೆ ವರ್ಷಕ್ಕೆ 24 ಸಾವಿರ ಸ್ಕಾಲರಶಿಫ್ ಸೌಲಭ್ಯವಿದ್ದು, ಜನ ಸಾಮಾನ್ಯರಿಗೆ ಈ ವಿಚಾರ ತಿಳಿದೇ ಇಲ್ಲ. ಆದ-ದರಿಂದ ತಮಗೆ ಗೊತ್ತಿರುವ ಯಾರಾದರೂ ತಂದೆ ಇಲ್ಲದ ಮಕ್ಕಳು ಇದ್ದಲ್ಲಿ ಅವರ ಪೋಷಕರಿಗೆ ಕೂಡಲೇ ಅರ್ಜಿ ಸಲ್ಲಿಸಲು ತಿಳಿಸಿ ಎಂಬ ಸಂದೇಶ ವಾಟ್ಸಪ್‌ನಲ್ಲಿ ಹರಿದಾಡುತ್ತಿದ್ದು, ಜನರನ್ನು ಗೊಂದಲಕ್ಕೀಡು ಮಾಡುತ್ತಿದೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣ ದಕ್ಷಿಣ ಕನ್ನಡ, ಮಂಗಳೂರು ಎಂಬ ಮೊಹರು ಹೊಂದಿರುವ ಈ ವಾಟ್ಸಪ್ ಸಂದೇಶ ಜನರ ಫೋನ್‌ಗಳಲ್ಲಿ ಒಂದು ತಿಂಗಳಿಂದ ಹರಿದಾಡುತ್ತಿದೆ.

ಈ ಸಂದೇಶವನ್ನು ನೋಡಿದ ಜನ ಪ್ರತಿನಿತ್ಯ ಗ್ರಾಮ ಪಂಚಾಯಿತಿ, ಕಂದಾಯ ಅಧಿಕಾರಿಗಳ ಕಚೇರಿ ತಾಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಮಕ್ಕಳ ರಕ್ಷಣಾ ಇಲಾಖೆ ಕಚೇರಿ ಸೇರಿ ಎಲ್ಲಾ ಕಡೆ ಅಲೆದಾಡುತ್ತಿದ್ದು, ಮಕ್ಕಳ ರಕ್ಷಣಾಧಿಕಾರಿ ಕಚೇರಿಯಲ್ಲಿ ಪ್ರತಿನಿತ್ಯ ನೂರಾರು ಜನರು ಬಂದು ಯೋಜನೆಯ ಬಗ್ಗೆ ಬಂದು ವಿಚಾರಿಸುತ್ತಿರುವುದು ಮತ್ತು ನೂರಾರು ಫೋನ್ ಕರೆಗಳು ಬರುತ್ತಿರುವುದು ಅಧಿಕಾರಿಗಳನ್ನು ಚಿಂತೆಗೀಡು ಮಾಡಿದೆ. ಈ ಸಂದೇಶವನ್ನೇ ಬಂಡವಾಳ ಮಾಡಿಕೊಂಡಿರುವ ಕೆಲವರು ಅಮಾಯಕ, ಮುಗ್ಧ ಜನರನ್ನು ಸುಲಿಗೆ ಮಾಡಲು ಶುರು ಮಾಡಿದ್ದಾರೆ. ಇದರಲ್ಲಿ ಎರಡು ವರ್ಗಗಳಿವೆ.

ತಡೆಗಟ್ಟುವ ಯತ್ನ :

ಸಂಕಷ್ಟಕ್ಕೆ ಈಡಾಗುವ ಕುಟುಂಬಕ್ಕೆ, ಮಗು ಜೈವಿಕ ಕುಟುಂಬದಲ್ಲೇ ಮುಂದುವರಿಯಲು, ಮಗು ಶಿಕ್ಷಣವನ್ನುಮುಂದುವರಿಸಲುಪ್ರಾಯೋಜಕತ್ವಬೆಂಬಲ ಒದಗಿಸುವುದು. ಮಕ್ಕಳು ನಿರ್ಗತಿಕರಾಗುವುದನ್ನು, ಸಂಕಷ್ಟಕ್ಕೀಡಾಗುವುದನ್ನು, ಓಡಿ ಹೋಗುವುದು, ಬಲವಂತದ ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ ಮುಂತಾದವುಗಳಿಂದ ತಡೆಗಟ್ಟುವ ಪ್ರಯತ್ನ ಇದಾಗಿದೆ. ಅಲ್ಲದೇ ಸಂಸ್ಥೆಗಳ ಒಳಗಿನ ಮಕ್ಕಳನ್ನು ಪ್ರಾಯೋಜಕತ್ವ ಸಹಾಯದೊಂದಿಗೆ ಕುಟುಂಬಗಳ ಜೊತೆಗೆ ಪುನರ್‌ಸ್ಥಾಪಿಸುವುದು.

ಫಲಾನುಭವಿಯಾಗಲು ಇರುವ ಮಾನದಂಡಗಳು:

ಈ ಯೋಜನೆಯ ಪ್ರಕಾರ ಫಲಾನುಭವಿಯಾಗಲು ಕೆಲವು ವಿಶೇಷ ಮಾನದಂಡಗಳಿವೆ. ಬಾಲಮಂದಿರ, ವೀಕ್ಷಣಾಲಯಗಳಿಂದ ಕುಟುಂಬಗಳಿಗೆ ಮರಳಿದ ಮಕ್ಕಳು, ಪೋಕ್ಸ್ ಸಂತ್ರಸ್ತ ಮಕ್ಕಳು, ತಾಯಿ ವಿಧವೆ ಅಥವಾ ವಿಚ್ಛೇದಿತ ಅಥವಾ ಕುಟುಂಬದಿಂದ ಪರಿತ್ಯಜಿಸಲ್ಪಟ್ಟಿದ್ದಲ್ಲಿ, ಮಕ್ಕಳು ಅನಾಥರಾಗಿದ್ದರೆ ಹಾಗೂ ವಿಸ್ತ್ರತ ಕುಟುಂಬದೊಂದಿಗೆ ವಾಸಿಸುತ್ತಿದ್ದರೆ, ಪೋಷಕರು ಮಾರಣಾಂತಿಕ ಕಾಯಿಲೆಯಿಂದ ಬಳಲುತ್ತಿದ್ದಲ್ಲಿ, ಪೋಷಕರು ಮಕ್ಕಳನ್ನು ನೋಡಿಕೊಳ್ಳಲು ಆರ್ಥಿಕವಾಗಿ ಹಾಗೂ ದೈಹಿಕವಾಗಿ ಅಸಮರ್ಥರಾಗಿದ್ದರೆ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಪ್ರಕಾರ ಪಾಲನೆ ಮತ್ತು ರಕ್ಷಣೆಯಅಗತ್ಯವಿರುವಮಕ್ಕಳುಅಂದರೆಮನೆಇಲ್ಲದ, ಯಾವುದೇ ನೈಸರ್ಗಿಕ ವಿಕೋಪಕ್ಕೆ ಒಳಗಾದವರು, ಬಾಲಕಾರ್ಮಿಕರು, ಬಾಲ್ಯವಿವಾಹ ಸಂತ್ರಸ್ತ ಮಕ್ಕಳು, ಅಥವಾ ಬೀದಿಬದಿ ಮಕ್ಕಳು, ಚಿತ್ರಹಿಂಸೆ ಅಥ-ವಾ ನಿಂದನೆಗೊಳಗಾದ ಮಕ್ಕಳು ಹಾಗೂ ಬೆಂಬಲ ಮತ್ತು ಪುನರ್ವಸತಿ ಅಗತ್ಯವಿರುವ ಶೋಷಿತ ಮಕ್ಕಳು, PM CARES for Childrens ಯೋಜನೆಯ ಅನುಮೋದಿತ ಮಕ್ಕಳು, ಜೈಲಿನಲ್ಲಿರುವ ಪಾಲಕರ ಮಕ್ಕಳು ಈ ಯೋಜನೆಯ ವ್ಯಾಪ್ತಿಗೆ ಒಳಪಡುವರು.

# ಎರಡು ದಿನ ರಾತ್ರಿಯಿಡಿ ಮಹಾಲಿಂಗೇಶ್ವರ ರಥೋತ್ಸವ

## ರಥೋತ್ಸವಕ್ಕೆ ಮೆರಗು ನೀಡುವ ಉಚ್ಚಾಯಿ ಬಂಡಿ ಹಾಗೂ ಕಂಡ್ಯಾಳ ಬಾಸಿಂಗ್–ನಂದಿಕೋಲು

* **ಚಂದ್ರಶೇಖರ ಮೋರೆ.**

**ಮಹಾಲಿಂಗಪುರ :** ಪ್ರತಿವರ್ಷ ಅನಂತ ಹುಣ್ಣಿಮೆಗೆಎರಡುದಿನಗಳಕಾಲನಡೆಯುವ ಪಟ್ಟಣದ ಆರಾಧ್ಯದೈವ ಮಹಾಲಿಂಗೇಶ್ವರ ಮಹಾಜಾತ್ರೆಯ ರಥೋತ್ಸವವು ಎರಡು ದಿನವುಸಂಜೆ7ರಿಂದಮರುದಿನಮುಂಜಾನೆ 6 ಗಂಟೆವರೆಗೂ ನಡೆಯುವದು ವಿಶೇಷ.

ಉಚ್ಚಾಯಿ ಬಂಡಿ ವಿಶೇಷ :

ದೇವಸ್ಥಾನದ ಸಂಪ್ರದಾಯದಂತೆ ಪ್ರತಿವರ್ಷ ಜಾತ್ರೆಯ ಜಟೋತ್ಸವ ಮುನ್ನ 5 ದಿನ ಮುಂಚಿತವಾಗಿ ಉಚ್ಚಾಯಿ ಬಂಡಿಗೆ ಪೂಜೆ ಸಲ್ಲಿಸಿ ಜಾತ್ರೆಯ ಉತ್ಸವಕ್ಕೆ ಚಾಲನೆ ನೀಡಲಾಗುತ್ತದೆ. ಉಚ್ಚಾಯಿ ಬಂಡಿಯಲ್ಲಿ ಬಸವಣ್ಣ ಮೂರ್ತಿ ಹಾಗೂ ಬಹುಎತ್ತರದ ಕಪಾಟುಗಳೊಂದಿಗೆ ಉಚ್ಚಾಯಿ ಬಂಡಿಯನ್ನು ನಿರ್ಮಿಸಲಾಗಿರುತ್ತದೆ. ಜಾತ್ರೆಗೆ ಮುನ್ನ ಪಟ್ಟಣದ ವಿಶ್ವಕರ್ಮ ಸಮಾಜದ ಬಂಧುಗಳು ಅದನ್ನು ತಯಾರಿಸುತ್ತಾರೆ. ಜಾತ್ರೆ ಆರಂಭವಾಗಿದೆ ಎಂಬ ಸಂಕೇತದ ಹಿನ್ನಲೆ ಮೊದಲ ನಾಲ್ಕು ದಿನದವರೆಗೆ ಉಚ್ಚಾಯಿ ಬಂಡಿಯನ್ನು ರಥೋತ್ಸವ ನಡೆಯುವ ಮಾರ್ಗಮಧ್ಯೆ ಪ್ರತಿದಿನ ನಿಗದಿತ ಸ್ಥಳದವರೆಗೆ ಮಾತ್ರ ಉಚ್ಚಾಯಿ ಬಂಡಿ ಎಳೆದು, ಮರಳಿ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ತರಲಾಗುತ್ತದೆ. ತುಂಬಿದ ತೇರಿನ ದಿನವೇ ಉಚ್ಚಾಯಿ ಬಂಡಿ ರಥೋತ್ಸವದೊಂದಿಗೆ ಚನ್ನಗಿರೇಶ್ವರ ದೇವಸ್ಥಾನ ತಲುಪುತ್ತದೆ. ರಥೋತ್ಸವದ ಮುಂದೆ ಇರುವ ಉಚ್ಚಾಯಿ ಬಂಡಿಯನ್ನು ಎಳೆಯಲು ನೂರಾರು ಸೇವಕರ ತಂಡವು ಎರಡು ದಿನ ರಾತ್ರಿಯಿಡಿ ಸೇವಾಕಾರ್ಯದಲ್ಲಿ ನಿರತರಾಗಿರುತ್ತಾರೆ.

ಆಕರ್ಷಣೆಯ ಕಂಡ್ಯಾಳ ಬಾಸಿಂಗ್:

ಮಹಾಲಿಂಗೇಶ್ವರ ರಥೋತ್ಸವದಲ್ಲಿ ಉಚ್ಚಾಯಿ ಬಂಡಿಗಿಂತ ಮುಂದೆ ಇರುವ ಕಂಡ್ಯಾಳ ಬಾಸಿಂಗ್ ಮತ್ತು ದೇವಸ್ಥಾನದ





ನಂದಿಕೋಲುಗಳು ಸಹ ರಥೋತ್ಸವಕ್ಕೆ ಹೆಚ್ಚಿನ ಮೆರಗು ನೀಡುತ್ತವೆ. ಜಾತ್ರೆಯು ಸಮೀಪಿಸುತ್ತಿದ್ದಂತೆ ಮಹಾಲಿಂಗೇಶ್ವರ ಮತ್ತು ಚನ್ನಗಿರೇಶ್ವರ ದೇವಸ್ಥಾನಗಳ ನೂರಾರು ಸೇವಕರು ಕಂಡ್ಯಾಳ ಬಾಸಿಂಗ್ ಮತ್ತು ನಂದಿಕೋಲು ಸಿದ್ದತೆ ಮಾಡಿಕೊಳ್ಳುತ್ತಾರೆ.

ಮಹಾಲಿಂಗೇಶ್ವರ ಭಾವಚಿತ್ರ, ಬಗೆ ಬಗೆಯ ಅಲಂಕಾರಿಕ ವಸ್ತುಗಳಿಂದ ತಯಾರಿಸುವ ಕಂಡ್ಯಾಳ ಬಾಸಿಂಗ್‌ಗಳನ್ನು ತಯಾರಿಸಲಾಗುತ್ತದೆ. ಕಂಡ್ಯಾಳ ಬಾಸಿಂಗ್‌ಗಳು ಕನಿಷ್ಟ 30–ರಿಂದ 40 ಅಡಿ ಎತ್ತರವಿರುತ್ತದೆ. ಅದಕ್ಕೆ ಹೂವು ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿರುತ್ತದೆ. ಒಂದು ಕಂಡ್ಯಾಳ ಬಾಸಿಂಗ್‌ಗೆ ಎರಡು–ಮೂರು ಹಗ್ಗಗಳನ್ನು ಕಟ್ಟಿ ಬ್ಯಾಲನ್ಸ್ ಮಾಡಲುತ್ತದೆ. ಸೇವಕರು ಅದನ್ನು ತಲೆಯ ಮೇಲೆಹೊತ್ತು ಹತ್ತತ್ತು ಹೆಜ್ಜೆಗಳಂತೆ ತೇರಿನ ಮುಂದೆ ಮುಂದೆ ಸಾಗುವದು ನಿಜಕ್ಕೂ ಸಾಹಸ ಹಾಗೂ ಮಹಾಲಿಂಗೇಶ್ವರನ ಭಕ್ತಿಯ ಶಕ್ತಿಯಾಗಿದೆ ಎಂದರೆ ತಪ್ಪಾಗಲಾರದು. ಅನಾದಿ ಕಾಲದಿಂದಲೂ ಮಹಾಲಿಂಗೇಶ್ವರ ರಥೋತ್ಸವದ ಮುಂದೆ ಕಂಡ್ಯಾಳ ಬಾಸಿಂಗ್‌ಗಳು ಮೆರಗು ನೀಡುತ್ತಿವೆ. ಇವುಗಳನ್ನು ತಯಾರಿಸುವದು ಮತ್ತು ಅವುಗಳನ್ನು ಹೊತ್ತು ಸಾಗುವ ನೂರಾರು ಸೇವಕರ ಭಕ್ತಿಯನ್ನು ಎಷ್ಟು ವರ್ಣಿಸಿದರು ಕಡಿಮೆ.

ಭಕ್ತಿಯ ನಂದಿಕೋಲು ಉತ್ಸವ :

15ರಿಂದ20ಅಡಿಉದ್ದದಕೋಲುಗಳೊಂದಿಗೆ ನಿರ್ಮಿಸಿರುವ ನಂದಿಕೋಲು ಉತ್ಸವ ಮಹಾಲಿಂಗೇಶ್ವರ ದೇವಸ್ಥಾನದಲ್ಲಿನ ಮತ್ತೊಂದು ಪ್ರಮುಖ ಆಚರಣೆಯಾಗಿದೆ. ಸೋಮವಾರವೇ ಮಹಾಲಿಂಗೇಶ್ವರರು ಗ್ರಾಮಕ್ಕೆ ಬಂದಿರುವ ಕಾರಣ ಸೋಮವಾರ ಮಹಾಲಿಂಗೇಶ್ವರರ ವಾರ ಮತ್ತು ಎಲ್ಲಾ ಕಾರ್ಯಗಳಿಗೆ ಶುಭವಾರವೆಂದು ಪರಿಗಣಿಸಿ, ಪಟ್ಟಣದ ಸಾರ್ವಜನಿಕರು ತಮ್ಮ ಎಲ್ಲಾ ಶುಭ ಕಾರ್ಯಕ್ರಮಗಳನ್ನು ಹೆಚ್ಚಾಗಿ ಸೋಮವಾರವೇ ಹಮ್ಮಿಕೊಳ್ಳುತ್ತಾರೆ.

ಜೊತೆಗೆ ಪ್ರತಿ ಸೋಮವಾರ ಪಟ್ಟಣದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆದರೂ, ಇನ್ನಿತರ ಯಾವುದೇ ತೊಂದರೆ–ತಾಪತ್ರಯಗಳು ಇದ್ದರೂ ಸಹ ಶ್ರೀಮಠದಿಂದ ರಬಕವಿ ರಸ್ತೆಯ ರೇವಡಗಿಡದ ಮಹಾಲಿಂಗೇಶ್ವರ ದೇವಸ್ಥಾನದವರೆಗೆ ನಂದಿಕೋಲ ಉತ್ಸವ ಕಡ್ಡಾಯವಾಗಿ ಜರಗುತ್ತದೆ. ಪ್ರತಿವರ್ಷ ಸಂಕ್ರಾಂತಿ ಮತ್ತು ರಬಕವಿ ಮಹಾದೇವ ಜಾತ್ರೆಯದಿನವುಸೇವಕರುಮಹಾಲಿಂಗೇಶ್ವರ ಪಲ್ಲಕ್ಕಿ ಮತ್ತು ನಂದಿಕೋಲುಗಳನ್ನು ಹೊತ್ತುಕೊಂಡು ಕೃಷ್ಣಾ ನದಿಗೆ ಹೋಗಿ ಬರುವ ಸಂಪ್ರದಾಯವನ್ನು ಇಂದಿಗೂ ತಪ್ಪದೇ ಪಾಲಿಸುತ್ತಿದ್ದಾರೆ.

ಮಾರ್ಗ ಮಧ್ಯೆ ಭಕ್ತಾಧಿಗಳು ನಂದಿಕೋಲುಗಳಿಗೆ ನೀರು ಹಾಕಿ ಪೂಜೆ ಸಲ್ಲಿಸಿ ಕಾಯಿ ಕರ್ಪೂರ ಸಮರ್ಪಿಸುತ್ತಾರೆ. ಇದಕ್ಕಾಗಿ ಚನ್ನಗಿರಿಶ್ವರ ದೇವಸ್ಥಾನ ಮತ್ತು ಮಹಾಲಿಂಗೇಶ್ವರ ದೇವಸ್ಥಾನದಿಂದ ನೂರಾರು ಜನರ ಸೇವಕರ ತಂಡಗಳಿವೆ. ಸೇವಕರು ಪ್ರತಿ ಸೋಮವಾರ ಪಾದರಕ್ಷೆಗಳನ್ನು ಧರಿಸದೆ ನಂದಿಕೋಲನ್ನು ತಲೆ ಮೇಲೆ ಹೊತ್ತು ಸೇವೆಯಲ್ಲಿ ಭಾಗವಹಿಸುತ್ತಾರೆ. ಪ್ರತಿವರ್ಷ ಜಾತ್ರೆಯ ಎರಡು ದಿನ ರಥೋತ್ಸವದ ಮುಂದೆ ಕಂಡ್ಯಾಳ ಬಾಸಿಂಗ್‌ಗಳ ಅಕ್ಕಪಕ್ಕದಲ್ಲಿ ಸಾಗುವ ನಂದಿಕೋಲುಗಳಿಗೂ ಭಕ್ತರು ಬೆಂಡು ಬೆತ್ತಾಸು, ಹೂವುಹಣ್ಣು ಹಾರಿಸಿ ಭಕ್ತಿಯ ನಮನಗಳನ್ನು ಸಲ್ಲಿಸುತ್ತಾರೆ.

ಒಟ್ಟಿನಲ್ಲಿ ಎರಡು ದಿನ ಇಡಿ ರಾತ್ರಿ ನಡೆಯುವ ಮಹಾಲಿಂಗೇಶ್ವರ ರಥೋತ್ಸವಕ್ಕೆ ಪೂರಕವಾಗಿ ನಡೆಯುವ ಬಂಡಿ ಉಚ್ಚಾಯಿ ಮತ್ತು ಕಂಡ್ಯಾಳ ಬಾಸಿಂಗ್–ನಂದಿಕೋಲು ಉತ್ಸವಗಳು ರಥೋತ್ಸವಕ್ಕೆ ಮೆರಗು ನೀಡುವದರೊಂದಿಗೆ ಭಕ್ತರ ಆಕರ್ಷನೆಯ ಕೇಂದ್ರ ಬಿಂದುಗಳಾಗಿರುತ್ತದೆ. ಇವುಗಳ ಆಕರ್ಷಣೆಯ ಹಿಂದೆ ಇರುವ ಸೇವಕರ ಶಕ್ತಿ, ಸಾಹಸ, ಭಕ್ತಿಯ ಸೇವಾಕಾರ್ಯವು ಅಪಾರವಾಗಿದೆ.



# ಜಿಲ್ಲಾ ಮಟಕ್ಕೆ ಥ್ರೋಬಾಲ್ ಆಯ್ಕೆ

**ಮೂಡಲಗಿ :** ಗುರ್ಲಾಪೂರ ಸರಕಾರಿ ಶಾಸಕರ ಮಾದರಿ ಶಾಲೆಯ ಬಾಲಕಿಯರು ಸುಣಧೋಳಿಯಲ್ಲಿ ನಡೆದ ತಾಲೂಕಾ ಮಟ್ಟದ ಥ್ರೋಬಾಲ್ ನಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ಕ್ಷೇತ್ರ ಶಿಕ್ಷಣಾಧಿಕಾರಿಗಳು ದೈಹಿಕ ಶಿಕ್ಷಣಾಧಿಕಾರಿಗಳು ಶಾಲಾ ಪ್ರಧಾನ ಗುರುಗಳು ಸಹ ಶಿಕ್ಷಕರು ಎಸ್.ಡಿ.ಎಂ.ಸಿ ಅಧ್ಯಕ್ಷರು ಸರ್ವ ಸದಸ್ಯರು ದೈಹಿಕ ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ,

# ಪ್ರಥಮ ಪಿಯುಸಿ ವಾಣಿಜ್ಯ ವಿಭಾಗ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ನಿರ್ವಹಣೆಯಾಗುತ್ತಿರುವ 2024–25ನೇ ಸಾಲಿನ ಜಿಲ್ಲೆಯ ಸರಕಾರಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವಾಣಿಜ್ಯ ವಿಭಾಗದ ಪ್ರವೇಶಕ್ಕೆ ವಿದ್ಯಾರ್ಥಿನಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಸೆಪ್ಟಂಬರ್ 25 ರೊಳಗಾಗಿ ಪೋಷಕರು, ವಿದ್ಯಾರ್ಥಿಗಳು ಎಲ್ಲಾ ದಾಖಲೆಗಳೊಂದಿಗೆ ನೇರವಾಗಿ ಹಲಗೇರಿ ರಸ್ತೆಯಲ್ಲಿನ ಹಿರೆಸಿಂದೋಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿನಲ್ಲಿ ಸಲ್ಲಿಸಬಹುದಾಗಿದೆ.

**ಅರ್ಹತೆಗಳು :**

10ನೇ ತರಗತಿಯಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗಿರಬೇಕು, 75 ರಷ್ಟು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು 25 ರಷ್ಟು ಇತ-ರೆ ವರ್ಗದವರಿಗೆ ಮೀಸಲಿಡಲಾಗಿದೆ, ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ರೂ ಮಿತಿಯೊಳಗಿರಬೇಕು, ಹಿಂದುಳಿದ ವರ್ಗಗಳ 2ಎ, 3ಎ ಮತ್ತು 3ಬಿ ಅಭ್ಯರ್ಥಿಗಳ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ರೂ ಮಿತಿಯೊಳಗಿರಬೇಕು. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ರೂ ಮಿತಿಯೊಳಗಿರಬೇಕು, ಅಂಗವಿಕಲ ವಿದ್ಯಾರ್ಥಿಗಳಿಗೆ 5 ರಷ್ಟು, ಮಾಜಿ ಸೈನಿಕರಿಗೆ 4 ರಷ್ಟು ಕಾಯ್ದಿರಿಸಲಾಗಿದೆ. ವಿಶೇಷ ದುರ್ಬಲ ವರ್ಗ 5 ರಷ್ಟು ಸಫಾಯಿ ಕರ್ಮಚಾರಿ ವಿದ್ಯಾರ್ಥಿಗಳಿಗೆ 5 ರಷ್ಟು ಕಾಯ್ದಿರಿಸಲಾಗಿದೆ, ಭರ್ತಿ ಮಾಡಿದ ಅರ್ಜಿಯೊಂದಿಗೆ ಕಂದಾಯ ಇಲಾಖೆಯ ತಹಶೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ಆಧಾರ ಕಾರ್ಡ್ ಹಾಗೂ ವಿದ್ಯಾರ್ಥಿ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜಿನ ಪ್ರಾಂಶುಪಾಲರ ಮೊ. ಸಂ 8951364026, 9916199806, ಗೆ ಸಂಪರ್ಕಿಸಬಹುದಾಗಿದೆ ಎಂದು ವಸತಿ ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆ ತಿಳಿಸಿದೆ.

# ಹೆಣ್ಣು ಭ್ರೂಣ ಹತ್ಯೆ ಅಪರಾಧ



**ಬನಹಟ್ಟಿ :** ಲಿಂಗ ಪತ್ತೆ ಮತ್ತು ಹೆಣ್ಣು ಭ್ರೂಣ ಹತ್ಯೆ ಮಹಾ ಅಪರಾಧವಾಗಿದೆ. ಹೆಣ್ಣು ಭ್ರೂಣ ಹತ್ಯೆ ನಡೆಯದಂತೆ ನಾವೆಲ್ಲರೂ ಗಮನ ನೀಡಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಮೇಲ್ವಿಚಾರಕಿ ಎಸ್. ಎಸ್. ಚನ್ನಿ ತಿಳಿಸಿದರು.

ಅವರು ಶುಕ್ರವಾರ ಇಲ್ಲಿನ ಮಾಳಿಂಗರಾಯ ಸಮುದಾಯ ಭವನದಲ್ಲಿ ರಾಷ್ಟ್ರೀಯ ಪೋಷಣ ಮಾಸಾಚರಣೆ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸರ್ಕಾರ ಮಹಿಳೆ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಹಾಗೂ ಹೆಣ್ಣು ಮಗುವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಯೋಜನೆಗಳ ಬಗ್ಗೆ ಇಲಾಖೆಯಿಂದ ಸೂಕ್ತ ಮಾಹಿತಿಯನ್ನು ಪಡೆದುಕೊಂಡು ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಯಾವುದೇ ಆಶೆ ಆಮಿಷಗಳಿಗೆ ಒಳಗಾಗದೆ ನೇರವಾಗಿ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬೇಕು ಎಂದು ಎಸ್. ಎಸ್. ಚನ್ನಿ ತಿಳಿಸಿದರು.

ರಬಕವಿ ಬನಹಟ್ಟಿ ಸಮುದಾಯ ಆರೋಗ್ಯ ಕೇಂದ್ರದ ಎಂ. ಕೆ. ಮುಲ್ಲಾ ಮಾತನಾಡಿ, ರಕ್ತ ಹೀನತೆ ಮತ್ತು ಅಪೌಷ್ಠಿಕತೆಯಿಂದ ಗರ್ಭಿಣಿಯರು ಬಳಲಬಾರದು. ಆದ್ದರಿಂದ ಉತ್ತಮ ಪೌಷ್ಠಿಕಾಂಶವುಳ್ಳ ಆಹಾರವನ್ನು ಸೇವನೆ ಮಾಡಬೇಕು. ಗರ್ಭಿಣಿಯರು ನಿಯಮಿತವಾಗಿ ತಮ್ಮ ಆರೋಗ್ಯವನ್ನು ತಪಾಸಣೆ ಮಾಡಿಕೊಳ್ಳಬೇಕು. ನವಜಾತ ಶಿಶುಗಳಿಗೆ ಸೂಕ್ತ ಸಮಯಕ್ಕೆ ಚುಚ್ಚು ಮದ್ದುಗಳನ್ನು ಹಾಕಿಸಿಕೊಳ್ಳಬೇಕು. ಬೆಳೆಯುವ ಮಕ್ಕಳಿಗೆ ಬೇಕರಿ ವಸ್ತುಗಳನ್ನು ನೀಡಬೇಡಿ ಎಂದರು.

ಕಾರ್ಯಕ್ರಮದಲ್ಲಿ ಶಿಕ್ಷಕ ಎಸ್. ಎಂ. ಹುಣಶ್ಯಾಳ ಮಾತನಾಡಿದರು.

ರಬಕವಿ ಬನಹಟ್ಟಿ ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ನಗರಸಭೆಯ ಸದಸ್ಯರಾದ ಶಿವಾನಂದ ಬುದ್ನಿ, ಶಶಿಕಲಾ ಸಾರವಾಡ, ಇಲಾಖೆಯ ಪ್ರಭು ಮೇತ್ರಿ. ಎಂ. ಎಸ್. ಹಿಪ್ಪರಗಿ, ಎಸ್. ಬಿ. ಕಾಲತಿಪ್ಪಿ, ವಹೀದಾ ಮಂಟೂರ, ವಿಶ್ವಜ ಕಾಡದೇವರ ಇದ್ದರು.

ಸವಿತಾ ಬಗಲಿ, ಪ್ರೇಮಾ ಮಾಲಾಪುರ, ಮೈತ್ರಿ ಕತ್ತಿ, ಎಸ್. ಸಿ. ಮುರಗೋಡ, ಎ. ಎಸ್. ಹಿರೇಮಠ, ವಿ. ಎಸ್. ಕಂಕಣವಾಡಿ ಸೇರಿದಂತೆ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಪರಮೇಶ್ವರಿ ಮಹಿಳಾ ಸೊಸೈಟಿಗೆ ರೂ. 13.90 ಲಕ್ಷ ಲಾಭ




**ಬನಹಟ್ಟಿ :** ಇಲ್ಲಿನ ಪರಮೇಶ್ವರಿ ಮಹಿಳಾ ಕೋ–ಆಪ್ ಕ್ರೆಡಿಟ್ ಸೊಸೈಟಿಗೆ ರೂ. 13,90,000/– ಲಾಭವಾಗಿದ್ದು ಸಂಘದ ಶೇರುದಾರರಿಗೆ ಶೇ. 10 ರಷ್ಟು ಲಾಭಾಂಶವನ್ನು ನೀಡಲಾಗುವುದು ಎಂದು ಸೊಸೈಟಿಯ ಅಧ್ಯಕ್ಷೆ ಮಾಲಾ ಬಾವಲತ್ತಿ ತಿಳಿಸಿದರು.

ಅವರು ಬನಹಟ್ಟಿಯ ಸಿದ್ದಾರೂಢ ಸಮುದಾಯ ಭವನದಲ್ಲಿ ನಡೆದ ಸೊಸೈಟಿಯ ಹತ್ತನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು.

ಸೊಸೈಟಿಯು ಸಂಪೂರ್ಣವಾಗಿ ಮಹಿಳೆಯರಿಂದ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಸೊಸೈಟಿಯ ಸದಸ್ಯರು ಸಂಘದ ಜೊತೆಗೆ ವ್ಯವಹರಿಸಿ ಸಂಘದ ಬೆಳವಣಿಗೆಗೆ ಸಹಕರಿಸಬೇಕು.

ಸಂಘದ ಬೆಳವಣಿಗೆಯಲ್ಲಿ ಶೇರುದಾರರ, ಆಡಳಿತ ಮಂಡಳಿಯ ಮತ್ತು ಸಂಘದ ಸಿಬ್ಬಂದಿ ವರ್ಗದವರ ಪಾತ್ರ ಬಹಳಷ್ಟು ಮುಖ್ಯವಾಗಿದೆ. ಮಹಿಳೆಯರು ಸ್ವಾವಲಂಬಿಗಳಾಗಿ ಬದುಕಲು ಸಂಘವು ಸಹಕಾರ ನೀಡುತ್ತಿದೆ ಎಂದು ಮಾಲಾ ಬಾವಲತ್ತಿ ತಿಳಿಸಿದರು.

ಸಭೆಯಲ್ಲಿ ಉಪಾಧ್ಯಕ್ಷೆ ವೀಣಾ ಕೊಕಟನೂರ, ರಬಕವಿ–ಬನಹಟ್ಟಿ ನಗರಸಭೆ ಅಧ್ಯಕ್ಷೆ ವಿದ್ಯಾ ಧಬಾಡಿ, ನಗರದ ಮುಖಂಡರಾದ ರಾಮಣ್ಣ ಭದ್ರನ್ನವರ ಮಾತನಾಡಿದರು.

ಶ್ರೀದೇವಿ ಬಾವಲತ್ತಿ, ಶಶಿಕಲಾ ಜಿಗಜಿನ್ನಿ, ಪವಿತ್ರಾ ಹಂಜಗಿ, ಮೇಘನಾ ಸೋನಾವನೆ, ಮಾಧುರಿ ಹಟ್ಟಿ, ಭುವನೇಶ್ವರಿ ಮಠಪತಿ, ಸುನಂದಾ ಬಡೇಮಿ, ದಾಕ್ಷಾಯಣಿ ಧಬಾಡಿ, ಲಕ್ಷ್ಮಿ ಟೊಪಗಿ, ಪೂಜಾ ಕೊಕಟನೂರ, ರಾಘು ಮುಗಳೊಳ್ಳಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ವಿಕಲಚೇತನ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಕೊಪ್ಪಳ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿನ ವಿಕಲಚೇತನ ವಿದ್ಯಾರ್ಥಿ ವೇತನ ಯೋಜನೆಯಡಿ ಪ್ರೀ ಮೆಟ್ರಿಕ್ ಹಾಗೂ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ವೇತನಕ್ಕೆ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಂದ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿಕಲಚೇತನ ವಿದ್ಯಾರ್ಥಿಗಳು ಎಸ್. ಎಸ್.ಪಿ ಪೋರ್ಟಲ್‌ನಲ್ಲಿ ಜಾಲತಾಣಗಳಾದ ಪ್ರೀ–ಮೇಟ್ರಿಕ್ https://ssp.karnataka.gov.in ಹಾಗೂ ಪೋಸ್ಟ್–ಮೆಟ್ರಿಕ್ https://ssp.Postmatric.karnataka.gov.in ಮೂಲಕ ಅಗತ್ಯ ದಾಖಲೆಗಳಾದ ಅಂಗವಿಕಲರ ಗುರುತಿನ ಚೀಟಿ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಅಂಕಪಟ್ಟಿ, ಫೋಟೋ ಹಾಗೂ ಬ್ಯಾಂಕ್ ಪುಸ್ತಕದೊಂದಿಗೆ ವಿಕಲಚೇತನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿಮ್ಮಡದಲ್ಲಿ ಪೋಷಣ್ ಮಾಶಾಚರಣೆ ಕಾರ್ಯಕ್ರಮ

# ಆರೋಗ್ಯಪೂರ್ಣ ತಾಯಿ, ಮಗೂ ಸರಕಾರದ ಆದ್ಯತೆ–ಬಿರಾದರ

**ಚಿಮ್ಮಡ :** ಸಮಾಜಕ್ಕೆ ಆರೋಗ್ಯಪೂರ್ಣ ತಾಯಿ , ಮಗುವನ್ನು ನೀಡುವ ನಿಟ್ಟಿನಲ್ಲಿ ಸರಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದು ಅವುಗಳ ಸದುಪಯೋಗ ಪಡೆದುಕೊಂಡು ಆರೋಗ್ಯವಂತರಾಗಬೇಕೆಂದು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದರ ಹೇಳಿದರು.

ಗ್ರಾಮದ ಶ್ರೀ ಬನಶಂಕರಿದೇವಿ ಕಲ್ಯಾಣ ಮಂಟಪದಲ್ಲಿ ಗುರುವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ, ತಾಲೂಕು ಆಡಳಿತ, ತಾಲುಕಾ ಪಂಚಾಯತ್, ಶಿಶು ಅಭಿವೃದ್ದಿ ಯೋಜನಾ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಪೋಷಣ್ ಅಭಿಯಾನ ಯೋಜನೆಯಡಿ




ಹಮ್ಮಿಕೊಂಡ "ಪೋಷಣ್ ಮಾಸಾಚರಣೆ" ಕಾರ್ಯಕ್ರಮದ ಉದ್ಘಾಟಣೆ ನೆರವೇರಿಸಿ ಮಾತನಾಡಿದ ಅವರು ಈ ಹಿಂದೆ ಹೆರಿಗೆ ಸಮಯದಲ್ಲಿ ತಾಯಿ ಅಥವಾ ಮಗು ಸಾವನ್ನಪ್ಪುವ ಪ್ರಕರಣ ಹೆಚ್ಚುತ್ತಿದ್ದವು ಈಗ ಮಹಿಳೆ ಗರ್ಭವತಿಯಾದಾಗಿನಿಂದ ಜನಿಸಿದ ಮಗು ಪ್ರೌಢಾವಸ್ತೆ ತಲುಪುವವರೆಗೂ ಸರಕಾರ ಪ್ರತೀ ಹಂತದಲ್ಲಿ ಮೊಟ್ಟೆ, ಹಾಲು ಸೇರಿದಂತೆ ಪೋಷಕಾಂಶಯುಕ್ತ ಆಹಾರ ನೀಡುತ್ತಿದೆ ಅಲ್ಲದೇ ಕಾಲಕಾಲಕ್ಕೆ ಪರೀಕ್ಷೆ ಮಾರ್ಗದರ್ಶನ ನೀಡುತಿದ್ದು ಇದರಿಂದ ಆಹಾರ ಕೊರತೆಯ ಮರಣ ಪ್ರಮಾಣ ಕಡಿಮೆಯಾಗಿದೆ ಎಂದರು.

ಶಿಕ್ಷಣ ಇಲಾಖೆಯ ಸಿಆರ್‌ಸಿ ಶ್ರೀಮತಿ ಗದ್ರಾಕ್ಷಾಯಿಣಿ ಮಂಡಿ ಮಾತನಾಡಿ ಗರ್ಭಿಣಿ ಹಾಗೂ ಮಗುವಿಗೆ ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ವಿವರಿಸಿದರು.

ಶಿಶು ಅಭಿವೃದ್ದಿ ಇಲಾಖೆಯ ಹಿರಿಯ ಮೇಲ್ವಿಚಾರಕಿ ಶ್ರೀಮತಿ ಎಸ್.ಎಸ್ ಚೆನ್ನಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸ್ಥಳಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈಧ್ಯಾಧಿಕಾರಿ ಶ್ರೀಮತಿ ಟಿ.ಎಸ್ ತಳ್ಳಿ ಮಾತನಾಡಿದರು.

ಸಮಾರಂಭದ ಅಧ್ಯಕ್ಷತಯನ್ನು ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ಉಪಾಧ್ಯಕ್ಷ ಶ್ರೀಮತಿ ಪ್ರೇಮಾ ಪರಪ್ಪಾ ಗೋವಿಂದಗೋಳ, ಗ್ರಾ.ಪಂ. ಸದಸ್ಯರಾದ ಪ್ರಕಾಶ ಪಾಟೀಲ, ಕೇಶವ ವಂದಾಲ, ಹಣಮಂತ ಬಜಂತ್ರಿ ಸೇರಿದಂತೆ ಹಲವು ಪ್ರಮುಖರು ಆಗಮಿಸಿದ್ದರು.

ಇದೇ ಸಂಧರ್ಬದಲ್ಲಿ ಹಲವು ಗರ್ಭಿಣಿ ಮಹಿಳೆಯರ ಸೀಮಂತ ಕಾರ್ಯಕ್ರಮ ಅನ್ನ ಪ್ರಾಶನ ಹಾಗೂ ಜನ್ಮದಿನ ಆಚರಣೆ ಕಾರ್ಯಕ್ರಮ ನಡೆಸಲಾಯಿತು.

ಕಾರ್ಯಕ್ರಮಕ್ಕೆ ಎಲ್. ಆರ್. ಕೋರಿಶೆಟ್ಟಿ ಸ್ವಾಗತಿಸಿದರು, ಪ್ರಭಾವತಿ ಸಗರಿ ನಿರೂಪಿಸಿದರು, ಎ.ಎಸ್. ಕರಿಗಾರ ವಂದಿಸಿದರು.

# ಟೇಬಲ್ ಟೆನ್ನಿಸ್ ರಾಜ್ಯ ಮಟ್ಟಕ್ಕೆ ಆಯ್ಕೆ



**ಬನಹಟ್ಟಿ :** ಇಲ್ಲಿನ ಎಸ್. ಆರ್. ಎ. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ತಂಡವು ಜಿಲ್ಲಾ ಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ವಿಜೇತರಾಗಿ ಚಿಕ್ಕಮಂಗಳೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ತೇರದಾಳದ ಪ್ರಭುಲಿಂಗೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಮುಕ್ತಾಯಗೊಂಡ ಪಂದ್ಯಾವಳಿಯಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಬಾಲಕರ ಮತ್ತು ಬಾಲಕಿಯರ ಎರಡು ವಿಭಾಗದಲ್ಲಿ ಚಾಂಪಿಯನ್ ಆಗಿದ್ದರು.

ವಿದ್ಯಾರ್ಥಿಗಳ ವಿಭಾಗದಲ್ಲಿ ಸುದೀಪ ಈಟಿ, ಸುಮಿತ ಈಟಿ, ಎಸ್. ಎಸ್. ಅಬಕಾರ, ವಿದ್ಯಾರ್ಥಿನಿಯರ ವಿಭಾಗದಲ್ಲಿ ಅನನ್ಯಾ ತಳವಾರ, ಐಶ್ವರ್ಯಾ ಆಳಗಿ ಮತ್ತು ಎ. ಎಸ್. ಕಾಡದೇವರ ತಂಡವನ್ನು ಪ್ರತಿನಿಧಿಸಿದ್ದರು. ವಿಜೇತ ತಂಡವನ್ನು ಪ್ರಾಚಾರ್ಯ ಬಿ. ಆರ್. ಗೊಡ್ಡಾಳೆ ಮತ್ತು ದೈಹಿಕ ನಿರ್ದೇಶಕ ಶಂಕರ ಸೊಲ್ಲಾಪುರ ಅಭಿನಂದಿಸಿದ್ದಾರೆ.

# ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನ ಆಚರಣೆ

**ಬಾಗಲಕೋಟೆ :** ಆತ್ಮಹತ್ಯೆ ಒಂದು ಸಾಮಾಜಿಕ ಪಿಡುಗಾಗಿದ್ದು ಅದನ್ನು ಎಲ್ಲರೂ ಸೇರಿ ತಡೆಗಟ್ಟಬೇಕು ಎಂದು ಬಸವೇಶ್ವರ ನರ್ಸಿಂಗ್ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ. ಜಯಶ್ರೀ ಇಟ್ಟಿಯವರು ಹೇಳಿದರು. ನಗರದಲ್ಲಿ ಬಸವೇಶ್ವರ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯ ಸಭಾಂಗಣದಲ್ಲಿ ನಡೆದ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಲ್ಲ ಸಮಸ್ಯೆಗಳಿಗೆ ಆತ್ಮಹತ್ಯೆ ಪರಿಹಾರವಲ್ಲ. ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಹಲವಾರು ದಾರಿಗಳಿದ್ದು ಅದನ್ನು ಹುಡುಕುವ ಪ್ರಯತ್ನವಾಗಬೇಕು. ಇವತ್ತಿನ ಯುವ ಪೀಳಿಗೆ ಸಣ್ಣ ಸಣ್ಣ ವಿಚಾರಗಳಿಗೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಜನರಲ್ಲಿ ಆತ್ಮಹತ್ಯೆಯನ್ನು ತಡೆಗಟ್ಟುವ ವಿಧಾನಗಳ ಬಗ್ಗೆ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು.



ಮಹಾವಿದ್ಯಾಲಯದ ಮನೋವೈದ್ಯಕೀಯ ವಿಭಾಗದ ಅಧ್ಯಾಪಕರಾದ ಶ್ರೀಮತಿ ಪೂರ್ಣಿಮಾ ಮೇಟಿ ಅವರು ವಿದ್ಯಾರ್ಥಿಗಳಿಗೆ ಆತ್ಮಹತ್ಯೆಯ ಹಲವಾರು ಕಾರಣಗಳಾದ ಸಾಮಾಜಿಕ, ಆರ್ಥಿಕ, ಕೌಟುಂಬಿಕ, ಉದ್ಯೋಗ ಸಮಸ್ಯೆ, ಶೈಕ್ಷಣಿಕ ಹಾಗೂ ಮಾನಸಿಕ ಹಾಗೂ ದೈಹಿಕ ಅನಾರೋಗ್ಯ ಸಮಸ್ಯೆಗಳ ಬಗ್ಗೆ ಹಾಗೂ ಆತ್ಮಹತ್ಯೆ ತಡೆಗಟ್ಟುವ ಹಲವಾರು ಪರಿಹಾರ ಮಾರ್ಗಗಳ ಬಗ್ಗೆ ಮಾಹಿತಿ ನೀಡಿ, ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ. 10.67% ಜನ ಆತ್ಮಹತ್ಯೆಗೆ ಒಳಗಾಗಿದ್ದಾರೆ. ಉದ್ಯೋಗ ಸಿಗದೇ ಆತ್ಮಹತ್ಯ ಮಾಡಿಕೊಂಡವರು 7.5% , ಪರೀಕ್ಷೆಯಲ್ಲಿ ಫೇಲಾದ ವಿದ್ಯಾರ್ಥಿಗಳು 5.5% , ಒಕ್ಕಲಿಗರು 7.7% , ಪ್ರತಿ 40 ನಿಮಿಷಕ್ಕೆ ಒಬ್ಬ ವ್ಯಕ್ತಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಆತ್ಮಹತ್ಯೆ ನಿವಾರಣೆಯ ಕುರಿತು ಜನರಲ್ಲಿ ಜಾಗೃತಿಯ ಅವಶ್ಯವದೆ ಎಂದು ಹೇಳಿದರು. ಆತ್ಮಹತ್ಯೆ ತಡೆಗಟ್ಟುವ ಕುರಿತು ಹಮ್ಮಿಕೊಳ್ಳಲಾದ ಮೈಮ್ ಶೋ ಸ್ಪರ್ಧೆಯಲ್ಲಿ ವಿಜೇತರಾದವ-ರಿಗೆ ಬಹುಮಾನ ವಿತರಿಸಲಾಯಿತು. ಮಹಾವಿದ್ಯಾಲಯದ ಜಿ. ಎನ್. ಎಮ್. ದ್ವಿತೀಯ ವರ್ಷದ ವಿದ್ಯಾರ್ಥಿಗಳು ಕಿರು ನಾಟಕದ ಮೂಲಕ ಆತ್ಮಹತ್ಯೆ ಒಂದು ಮಹಾಪಾಪ ಅದರಿಂದ ಸಂಪೂರ್ಣ ನಿವಾರಣೆಯನ್ನು ಹೊಂದಬೇಕೆಂಬುದನ್ನು ತಿಳಿಸಿದರು. ಮಹಾವಿದ್ಯಾಲಯದ ಎಲ್ಲ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ಎಲ್ಲ ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# "ದೇವರಿಗೂ ಕೂಡ ಮೋಸ ಮಾಡುವಂತಹ ಹೀನ ಸ್ಥಿತಿಗೆ ಮಾನವ ಇಳಿಯಬಾರದು": ಡಾ. ಹನುಮಂತನಾಥ ಮಹಾಸ್ವಾಮಿಗಳು



"ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸುಪ್ರಸಿದ್ಧವಾದಂತಹ ತಿರುಮಲ ತಿರುಪತಿ ದೇವಸ್ಥಾನದಲ್ಲಿ, ಪ್ರಾಣಿಗಳ ಕೊಬ್ಬನ್ನು ಮತ್ತು ಕಲಬೆರಕೆ ತುಪ್ಪವನ್ನು ಬಳಸಿ, ಲಡ್ಡು ತಯಾರಿಸಿ, ಭಕ್ತರಿಗೆ ಹಂಚಿ, ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತಂದಿರುವ ನೀಚ ಕೃತ್ಯವನ್ನು ಶ್ರೀಮಠ ಖಂಡಿಸುತ್ತದೆ. ಯಾವುದೇ ಧರ್ಮದಲ್ಲಿ, ಯಾವುದೇ ದೇವಾಲಯದಲ್ಲಿ ಇಂತಹ ಹೀನ ಕೃತ್ಯ ಆಗಬಾರದು. ದೇವರಿಗೂ ಕೂಡ ಮೋಸ ಮಾಡುವಂತಹ ಹೀನ ಸ್ಥಿತಿಗೆ ಮಾನವ ಇಳಿಯಬಾರದು. ಇಡೀ ದೇಶದ ಬುದ್ಧಿವಂತರು, ಪ್ರಜ್ಞಾವಂತರು, ಸಾಮಾಜಿಕ ಕಳಕಳಿಯುಳ್ಳವರು ಮತ್ತು ಎಲ್ಲಾ ನಾಗರಿಕರು ಇದನ್ನು ಖಂಡಿಸಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆ ಎಲ್ಲೇ ನಡೆದರೂ ಅತ್ಯಂತ ದೊಡ್ಡ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಇಂತಹ ದುಷ್ಕೃತ್ಯದ ವಿರುದ್ಧ ಎಲ್ಲರೂ ಧ್ವನಿ ಎತ್ತಿ ಖಂಡಿಸಬೇಕಾಗುತ್ತದೆ" ಎಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಇತ್ತೀಚೆಗೆ ನೇಮಕವಾಗಿರುವ ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕು, ಎಲೇರಾಂಪುರದಲ್ಲಿರುವ ಶ್ರೀ ಕುಂಚಿಟಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ ಹನುಮಂತನಾಥ ಮಹಾಸ್ವಾಮಿಗಳು ತಿಳಿಸಿದ್ದಾರೆ.

# ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವಕ್ಕೆ ಚಾಲನೆ

## ಶ್ರೀ ಸಿದ್ದೇಶ್ವರ ಶ್ರೀಗಳ ಮಾತನ್ನು ನೆನಪಿಸಿದ ಸಚಿವ ಎಂಬಿ ಪಾಟೀಲ

**ವರದಿ:ಲಾಲಸಾಬ ಸವಾರಗೋಳ**

**ವಿಜಯಪುರ :** ಜಿಲ್ಲೆಯ ತಿಕೋಟಾ ತಾಲ್ಲೂಕಿನ ಜಾಲಗೇರಿ ಗ್ರಾಮದ ಎಲ್.ಟಿ. 1ರಲ್ಲಿ ಜರುಗಿದ ಶ್ರೀ ದುರ್ಗಾದೇವಿ ಜಾತ್ರಾ ಮಹೋತ್ಸವದಲ್ಲಿ ಸಚಿವ ಎಂ.ಬಿ ಪಾಟೀಲ ಅವರು ಪಾಲ್ಗೊಂಡು, ದೇವರ ದರ್ಶನ ಪಡೆದು, ನಾಡಿನ ಸಮಸ್ತ ಜನತೆಯ ಶ್ರೇಯೋಭಿವೃದ್ಧಿಗಾಗಿ ಪ್ರಾರ್ಥನೆ ಸಲ್ಲಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು ನಾವು ಹಾರ ಹಾಕಿಸಿಕೊಳ್ಳುವುದು ಬಂದ್ ಮಾಡಿದ್ದೇವೆ ಸಿದ್ದೇಶ್ವರ ಸ್ವಾಮಿಗಳು ಶಾಲು ಹಾರ ಜೀರ ಖರ್ಚು ಮಾಡಬೇಡಿ ಶಾರು ಹಾರದ ಬದಲಿಗೆ ಒಂದು ನೋಟ್ಬುಕ ಪುಸ್ತಕ ಕೊಡ್ರಿ ಎಂದು ಹೇಳಿದ್ದಾರೆ ಅದಕ್ಕಾಗಿ ನಾನು ಇವತ್ತಿನ್ ದಿವ್ಸ ಶಾಲು ಹಾರ ಬಂದ್ ಮಾಡಿದ್ದೇನೆ ತಾವು ಏನಾದರೂ ನನಗೆ ಸನ್ಮಾನ ಮಾಡುವುದಿದ್ದರೆ ಒಂದಿಷ್ಟು ನೋಟು ಬುಕ್ ಗಳನ್ನು ಕೊಡಿ ನಾವು ಅವುಗಳನ್ನು ಮಕ್ಕಳಿಗೆ ಕೊಡುತ್ತೇನೆ ಎಂದು ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಮಾತುಗಳನ್ನು ನೆನಪಿಸಿಕೊಂಡರು.

ಬಂಜಾರಾ ಸಮಾಜ ಬಸವಾದಿ ಶರಣರ ಕಾಯಕ ತತ್ವ ಪಾಲಿಸುವುದರ ಜೊತೆಗೆ ಅದರದೇ ಆದ ಸಂಸ್ಕೃತಿಯನ್ನೂ ಮುಂದುವರೆಸಿಕೊಂಡು ಬರುತ್ತಿದೆ,ಬಬಂಜಾರಾ ಸಮಾಜ ಅದರದೇ ಆದ ವಿಭಿನ್ನ ಸಂಸ್ಕೃತಿ ಹೊಂದಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಪ್ರಕಾಶ್ ಮಹಾರಾಜರ ದಿವ್ಯ ಸಾನಿಧ್ಯದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿ ತಾಂಡಾಗಳ ಅಭಿವೃದ್ಧಿಗೆ ಸಲ್ಲಿಸಿದ ಸೇವೆಗಳ ಬಗ್ಗೆ ಮಾಹಿತಿ ಹಂಚಿಕೊಂಡರು.

ಸಮಾರಂಭದಲ್ಲಿ ಸ್ಥಳೀಯ ಮುಖಂಡರು, ಗ್ರಾಮ ಹಿರಿಯರು, ಯುವಕರು ಮತ್ತು ತಾಯಂದಿರು ಉಪಸ್ಥಿತರಿದ್ದರು.

## ಏಳೇಳು ಎದ್ದೇಳು ಗೋವಿಂದ



ಏನಿದು ಗೋವಿಂದ ಕಲಿಯುಗದ
ಕರ್ಮ ಕಾಂಡವೇ
ತಿರುಪತಿ ಲಡ್ಡು ಪ್ರಸಾದದಲಿ ಪಶುಗಳ
ಕೊಬ್ಬಿನ ಪದಾರ್ಥವೇ ॥

ಚಿನ್ನವಜ್ರಾಭರಣಗಳ ಹೊಳಪಿನಲ್ಲಿ
ಕಲಬೆರಕೆ ಕಾಣಲಿಲ್ಲವೇ
ದುಷ್ಟ ಜನರ ಸಂಹರಿಸಲು ಸುದರ್ಶನ
ಚಕ್ರ ಕೈಗೆ ಸಿಗಲಿಲ್ಲವೇ..॥

ಚಳಿ ಗಾಳಿ ಬಿಸಿಲು ಲೆಕ್ಕಿಸದೆ ಸರದಿಯಲ್ಲಿದ್ದ
ಭಕ್ತರು ಕಾಣಲಿಲ್ಲವೇ
ಗೋವಿಂದನ ನಾಮ ಜಪಿಸುವವರಿಗೆ
ಮೋಸ ಮಾಡಲಿಲ್ಲವೇ?.. ॥

ಕುಬೇರನ ಸಾಲ ತೀರಿಸಲು ಕಟ್ಟಿಟ್ಟ ಹರಕೆ
ಹಣ ಮುಜರಾಯಿಗೆ ಹೋಯಿತೆ?
ಅಧರ್ಮಿಯರ ಆಳ್ವಿಕೆಯಲಿ ತಿರುಮಲೆಯ
ಅಸ್ತಿತ್ವಕೆ ಧಕ್ಕೆಯಾಯಿತೆ?.. ॥

ಭಕ್ತರ ಮೊರೆ ಕೇಳುವ ಸೂಕ್ಷ್ಮ ಕರ್ಣಗಳಿಗೆ
ವಿಷಯ ತಿಳಿಯಲಿಲ್ಲವೇ
ಕಲಬೆರಿಕೆಯ ನೈವೇದ್ಯ ಪ್ರಸಾದವನು
ನಾಸಿಕ ಅಘ್ರಾಣಿಸಲಿಲ್ಲವೇ..॥

ಕಾನೂನಿನ ದೇವತೆಯಂತೆ ನೀನು
ತಟಸ್ಥನಾಗಿ ಹೋದೆಯ
ಅಕ್ಷಿಪಟಲಕೆ ವಸ್ತ್ರ ಬಿಗಿದು ಸುಮ್ಮನೇ
ನೋಡುತ ನಿಂತೆಯ.. ॥

ಹಿಂದೂಗಳು ಮಲಗಿದ್ದಾರೆಂದು
ನೀನು ಮಲಗಿಬಿಟ್ಟೆಯ ಗೋವಿಂದ
ಸುಪ್ರಭಾತ ಹೇಳಿ ಎಚ್ಚರಿಸುವರ
ಮರೆತುಬಿಟ್ಟೆಯ ಗೋವಿಂದ..॥

ಏಳೇಳು ಎದ್ದೇಳು ಜಗದೋದ್ಧಾರಕ
ದುಷ್ಟ ಜನರನು ಸಂಹರಿಸು
ನಿನ್ನಿರುವಿಕೆಯ ಅಸ್ತಿತ್ವವನು ಜಗದಗಲ
ಮತ್ತೊಮ್ಮೆ ತೋರಿಸು..॥

* ಲತಾ ಕೆ.ಎಸ್.ಹೆಗಡೆ
ಬೆಂಗಳೂರು

# ಸಂಘವು ಪ್ರಗತಿ ಪಥದತ್ತ ಸಾಗಲು ಎಲ್ಲರೂ ಒಂದಾಗಿ ಪ್ರಾಮಾಣಿಕ ಪ್ರಯತ್ನ ಮಾಡೋಣಾ



**ಹಳ್ಳೂರ :** ಸೋಮೈಯ್ಯ ಸಕ್ಕರೆ ಕಾರ್ಖಾನೆಯ ನೌಕರದಾರರ ಸಹಕಾರಿ ಪತ್ತಿನ ಸಂಘವು ಸದಸ್ಯರ, ಕಾರ್ಮಿಕ ಗ್ರಾಹಕರ ಸಹಕಾರದೊಂದಿಗೆ ಸಂಘವು ಪ್ರಗತಿ ಪಥದತ್ತ ಸಾಗುತ್ತಿದೆ ಎಂದು ಅಧ್ಯಕ್ಷ ಮನೋಹರ ಬಡಿದಾಳ ಹೇಳಿದರು. ಅವರು ಸಮೀರವಾಡಿ ಸೊಮೈಯ್ಯ ಸಕ್ಕರೆ ಕಾರ್ಖಾನೆಯ ನೌಕರದಾರರ ಸಹಕಾರಿ ಪತ್ತಿನ ಸಂಘ ನಿಯಮಿತ 2023-24 ನೇ ಸಾಲಿನ 44 ನೇ ಸರ್ವ ಸಾದಾರಣ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಸಹಕಾರಿ ಸಂಘ ,ಬ್ಯಾಂಕುಗಳು ಬೆಳವಣಿಗೆ ಹೊಂದಬೇಕಾದರೆ ಗ್ರಾಹಕರೊಂದಿಗೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳು ಉತ್ತಮ ಬಾಂಧವ್ಯ ಹೊಂದಿರಬೇಕು ಅಂದಾಗ ಆರ್ಥಿಕವಾಗಿ ಬೆಳವಣಿಗೆ ಹೊಂದಲು ಸಾಧ್ಯ. ಸಂಘವು ಪ್ರಗತಿ ಪಥದತ್ತ ಸಾಗಲು ಎಲ್ಲರೂ ಒಂದಾಗಿ ಪ್ರಾಮಾಣಿಕ ಪ್ರಯತ್ನ ಮಾಡೋಣಾ ಎಂದು ಹೇಳಿದರು.

2023-24 ನೇ ಸಾಲಿನ ವರದಿ ವಾಚನವನ್ನು ಕಾರ್ಯದರ್ಶಿ ರವಿರಾಜ ಕಂಬಾರ ಮಾಡಿದರು.

ಸಂಘದ ಸದಸ್ಯರುಗಳ ಮಕ್ಕಳು ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ವಿದ್ಯಾರ್ಥಿಗಳಿಗೆ ಬಹುಮಾನ ವಿತ-ರಿಸಲಾಯಿತು. ಹಾಗೂ 2024 -25 ನೇ ಹಂಗಾಮಿನಲ್ಲಿ ನಿವೃತ್ತಿ ಆಗುತ್ತಿರುವ ಕಾರ್ಮಿಕರಿಗೆ ಸನ್ಮಾನ ಮಾಡಿ ಸತ್ಕ-ರಿಸಿದರು.

ಈ ಸಮಯದಲ್ಲಿ ಮುಖ್ಯ ಅತಿಥಿಗಳಾಗಿ ಎಂ ಕೆ ಚಾಹುಸ. ಮಜದೂರ ಯೂನಿಯನ ಅಧ್ಯಕ್ಷ ಬಿ ಪಿ ಪೂಜಾರಿ. ಮಲ್ಲಪ್ಪ ಶಿರಹಟ್ಟಿ. ಗುರುಲಿಂಗ ಹಮ್ಮಿದಡ್ಡಿ. ಸಿದರಾಯ ಚೌದರಿ. ವಿಮಲಾ ಸತ್ತಿಗಿಹಳ್ಳಿ. ಪಾರ್ವತಿ ಪೂಜಾರಿ. ಚನ್ನಪ್ಪ ದೇಶನೂರ. ಪ್ರಭಾಕರ ಶಿರೋಳ. ಸುನೀಲ ಕರಡೆ. ಕಲ್ಲಪ್ಪ ಒಡೆಯರ. ಮುರಿಗೆಪ್ಪ ಮಾಲಗಾರ. ಸಂಜುಕುಮಾರ ಹಳ್ಳಿ. ಸಿದ್ದು ಇಟ್ನಾಳ.ಸೇ-ರಿದಂತೆ ಆಡಳಿತ ಮಂಡಳಿ ಸಂಘದ ಸರ್ವ ಸದಸ್ಯರು ಗ್ರಾಹಕರು ಸಿಬ್ಬಂದಿಗಳಿದ್ದರು. ಕಾರ್ಯಕ್ರಮವನ್ನು ಈಶ್ವರ ಕುಳ್ಳೊಳ್ಳಿ ಸ್ವಾಗತಿಸಿ ನಿರೂಪಿಸಿದರು.ಉಪಾಧ್ಯಕ್ಷ ಫಕೀರಪ್ಪ ವಗ್ಗರ ವಂದಿಸಿದರು.

## ಶ್ರೀರಾಮ ಸುಢಾಳ ನಿಧನ




**ರಬಕವಿ :** ಇಲ್ಲಿಯ ಮಾರ್ಕೆಟ ಓಣಿಯ ರಹವಾಸಿ ಹಾಗೂ ಇತ್ತೀಚೆಗೆ ಸಾಂಗಲಿಯಲ್ಲಿ ವಾಸ್ತವ್ಯದಲ್ಲಿದ್ದ ನಾಮದೇವ ಶಿಂಪಿ ಸಮಾಜದ ಶ್ರೀರಾಮ ವಾಮನರಾವ್ ಸುಢಾಳ ಸಪ್ಟೆಂಬರ್ 20 ರಂದು ತಮ್ಮ 75 ನೆಯ ವಯಸ್ಸಿನಲ್ಲಿ ಸಾಂಗ್ಲಿಯಲ್ಲಿ ನಿಧನರಾದರು. ಮೃತರು ತಮ್ಮ ಹಿಂದೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಪಿ.ಎಫ್: 27 ರಂದು ಜಿಲ್ಲಾ ಜಾಗೃತಿ ಶಿಬಿರ

**ಬಾಗಲಕೋಟೆ :** ಭವಿಷ್ಯನಿಧಿ, ಪಿಂಚ ಣಿಗಳಿಗೆ ಸಂಬಂಧಿಸಿದ ಕುಂದು ಕೊರತೆಗಳನ್ನು ಪರಿಹರಿಸುವ ಸಲು ವಾಗಿ ಸೆ.27 ರಂದು ಬೆಳಿಗ್ಗೆ 9.30 ರಿಂದ ಸಂಜೆ 4 ಗಂಟೆವರೆಗೆ ಬಾಗಲಕೋಟೆ ನವನಗರದ ಎಪಿಎಂಸಿ ಯಾರ್ಡ ವಿಜಯ ಮೋಟೋವಿಂಗ್ಸ್ ಪ್ರೈವೆಟ್ ಲಿಮಿಟೆಡ್‌ನಲ್ಲಿ ಜಿಲ್ಲಾ ಜಾಗೃತಿ ಶಿಬಿರ ಆಯೋಜಿಸಲಾಗಿದೆ.

ಪಿಂಚಣಿದಾರರು ಇಪಿಎಫ್ ಚಂದಾದಾರರು ಮತ್ತು ಉದ್ಯೋಗದಾತರು ತಮ್ಮ ಕುಂದು ಕೊರತೆಗಳ ಪರಿಹಾರಕ್ಕೆ ಮತ್ತು ಹೆಚ್ಚಿನ ಮಾಹಿತಿಗಾಗಿ sro.raichur@epfindia.gov.in & do. bagalkot@epfindia.gov.in ಗೆ ಸಂಪರ್ಕಿಸುವಂತೆ ರಾಯಚೂರು ಪ್ರಾದೇಶಿಕ ಕಚೇರಿಯ ಪಿಎಫ್ ಕಮೀ ಷನರ್-2 ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇತರೆಲ್ಲ ಮಾನವರಂತೆ ಮೊಹಮ್ಮದ್(ಸ) ಕೂಡ ದೇವರ ದಾಸರಾಗಿದ್ದರು: ಕಂದಗಲ್



**ಕೊಪ್ಪಳ :** ಯಾರು ಪ್ರವಾದಿ ಮೊಹಮ್ಮದ್ ಸಲ್ಲಲ್ಲಾಹೂ ಅಲೈವ ಸಲ್ಲಂ ಅವರನ್ನು ದೇವರೆಂದಾಗಲಿ, ದೇವರ ಅವತಾರವೆಂದಾಗಲಿ, ದೇವರ ಪುತ್ರ ಅಥವಾ ದೇವರ ಸಂತಾನ ಎಂದಾಗಲಿ ದೇವರ ಸಹಾಯಕ ಅಥವಾ ಪಾಲುದಾರನೆಂದಾಗಲಿ ಕರಿಯುವುದಿಲ್ಲ ಅವರು ಕೂಡ ಇತರೆಲ್ಲ ಮಾನವರಂತೆ ದೇವರ(ಸೃಷ್ಟಿಕರ್ತ ಅಲ್ಲಾಹನ) ದಾಸರಾಗಿದ್ದರು ,ಅದುವೇ ಅವರ ಕುರಿತು ಹೇಳಬಹುದಾದ ಅತ್ಯಂತ ಗೌರವದ ಮಾತಾಗಿದೆ ಎಂದು ಇಲ್ಕಲ್ಲಿನ ಆರಬಿಕ್ ಶಿಕ್ಷಕ ಪ್ರವಚನಕಾರ ಲಾಲ್ ಹುಸೇನ್ ಕಂದಗಲ್ ಹೇಳಿದರು,

ಅವರು ಶುಕ್ರವಾರ ಸಂಜೆ ನಗರದ ಮುಸ್ಲಿಂ ಶಾದಿ ಮಹಲ್ ಸಭಾಂಗಣದಲ್ಲಿ ಜಮಾತೆ ಇಸ್ಲಾಮಿ ಹಿಂದ್, ಕೊಪ್ಪಳ ಘಟಕ ಏರ್ಪಡಿಸಿದ ಪ್ರವಾದಿ ಮೊಹಮ್ಮದ್ (ಸ) ರವರ ಜೀವನ ಚರಿತ್ರೆ ಕುರಿತಾದ ವಿಚಾರ ಗೋಷ್ಠಿ ಅವರ ಜೀವನ ಚರಿತ್ರೆ ಕುರಿತಾದ ಪುಸ್ತಕ ಬಿಡುಗಡೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು,

ಮುಂದುವರೆದು ಮಾತನಾಡಿದ ಅವರು ,ನಿನ್ನ ನಾಲಿಗೆಯಿಂದ ಮತ್ತು ಕೈಯಿಂದ ಇನ್ನೊಬ್ಬರಿಗೆ ನೋವು ತೊಂದರೆ ಯಾಗಿಲ್ಲ ಎಂದರೆ ಅವನೆ ಶ್ರೇಷ್ಠವಾದ ಮನುಷ್ಯ ಎಂದು ಪ್ರವಾದಿ ಹೇಳಿದ್ದಾರೆ, ಪ್ರವಾದಿಯವರು ಮಹಾನ್ ಚಾರಿತ್ರ್ಯವಂತರು , ವಿಜ್ಞಾನಿ ತಂತ್ರಜ್ಞಾನಿ, ಉತ್ತಮ ಆಡಳಿತಗಾರ ಅವರು ಮಾನವನಿಗೆ ಸನ್ಮಾರ್ಗ ತೋರಿಸಿದ್ದಾರೆ ಅವರು ಎಂದಿಗೂ ತಮ್ಮ ಜನ್ಮ ದಿನಾಚರಣೆ ಆಚರಿಸಿಕೊಂಡಿಲ್ಲ ಇತರರಿಗೂ ಕೂಡ ಅದೇ ಉಪದೇಶ ನೀಡಿದ್ದಾರೆ, ಡೇಟ್ ಆಫ್ ಬರ್ತ್ ಯಾರಿಗೆ ಇದೆಯೋ ಅವರು ದೇವರು ಅಲ್ಲ, ದೇವರಿಗೆ ಡೇಟ್ ಆಫ್ ಬರ್ತ್ ಇರುವುದಿಲ್ಲಎಂದ ಅವರು ಪ್ರತಿಯೊಬ್ಬರು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡು ಪರಸ್ಪರ ಸೌಹಾರ್ದತೆ ಯುತವಾಗಿ ಬಾಳಿ ತಮ್ಮ ಬದುಕು ಸಾರ್ಥಕ ಮಾಡಿಕೊಳ್ಳಬೇಕು ಅಂದಾಗ ಮಾತ್ರ ಮನುಷ್ಯನ ಜೀವನ ಸಾರ್ಥಕವಾಗುತ್ತದೆ ಎಂದು ಪ್ರವಚನಕಾರ ಲಾಲ್ ಹುಸೇನ್ ಕಂದಗಲ್ ಹೇಳಿದರು.

ಸಮಾರಂಭದ ಸಾನಿಧ್ಯ ವಹಿಸಿದ್ದ ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದ ಪೀಠಾಧಿಪತಿ ಶ್ರೀ ಚೈತನ್ಯಾನಂದ ಸ್ವಾಮೀಜಿ ಆಶೀರ್ವಚನ ನೀಡಿ ಸಮಾಜಕ್ಕೆ ಬೆಳಕು ನೀಡಲು ಶರಣರು ಸಿದ್ದರಿರುತ್ತಾರೆ ನಾವೆಲ್ಲರೂ ಮಾನವರು ಸದಾಕಾಲ ಮಾನವರ ಹಿತ ಬಯಸಿ ಶ್ರಮಿಸಬೇಕು ಅದೇ ಸಾಧು ಸಂತರು ಪ್ರವಾದಿಗಳು ಹೇಳಿದ್ದಾರೆ ಎಂದು ನುಡಿದರು, ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್, ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡಿ ಪ್ರವಾದಿ ಯವರ ನಡೆ-ನುಡಿ ಇಡೀ ಪ್ರಪಂಚಕ್ಕೆ ಒಂದು ಮಾದರಿಯಾಗಿದೆ. ಎಂದರು, ನಾವೆಲ್ಲರೂ ಭಾರತೀಯರು ಮಾನವರು ಪರಸ್ಪರ ಪ್ರೀತಿ ವಿಶ್ವಾಸ ಸೌಹಾರ್ದತೆ ಬೆಳೆಸಿಕೊಂಡು ಜೀವನ ಸಾಗಿಸಬೇಕು ಅದೇ ಪ್ರವಾದಿ ತೋರಿಸಿದ ಮಾರ್ಗವಾಗಿದೆ ಎಂದರು ,ಮಾಜಿ ಅಧ್ಯಕ್ಷ ಚಂದ್ರಶೇಖರ್ ಕೌಲೂರ್, ಮಾತನಾಡಿ ಮಹಾಪುರುಷರು ಸಂತರು ಹಾಕಿಕೊಟ್ಟ ಮಾರ್ಗದಲ್ಲಿ ಎಲ್ಲರೂ ನಡೆಯೋಣ ಎಂದರು, ಸದ್ಭಾವನ ವೇದಿಕೆಯ ಅಧ್ಯಕ್ಷರಾದ ಡಾ, ಸುಶೀಲ್ ಕುಮಾರ್ ಕಲಾಲ್ ಮಾತನಾಡಿ ಪ್ರವಾದಿ ಅವರ ಜೀವನದ ಬಗ್ಗೆ ಹೇಳುವುದು ಅಷ್ಟು ಸುಲಭವಲ್ಲ ಅವರು ಸೃಷ್ಟಿಕರ್ತನ ಸಂದೇಶ ನಿರ್ವಾಹಕರಾಗಿದ್ದು ಇಡೀ ಮನುಜ ಕುಲಕ್ಕೆ ಶಾಂತಿಯ ಸಂದೇಶ ನೀಡಿ ಸನ್ಮಾರ್ಗ ತೋರಿಸಿದ್ದಾರೆ ಎಂದರು ,ಸಾಹಿತಿ ಪತ್ರಕರ್ತ ಜಿಎಸ್ ಗೋನಾಳ ಯುವ ನಾಯಕ ನಿತೇಶ್ ಕುಮಾರ್ ಪುಲಸ್ಕರ್, ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು, ವೇದಿಕೆ ಮೇಲೆ ಹಿರಿಯ ಪತ್ರಕರ್ತ ಎಂ ಸಾಧಿಕಅಲಿ ನಿವೃತ್ತಿ ಶಿಕ್ಷಕ ಎಸ್ ಸಿ ಹಿರೇಮಠ್ ಪಾಲ್ಗೊಂಡಿದ್ದು ಆರಂಭದಲ್ಲಿ ಹಾಫೀಸ್ ಮೌಲಾನ ಯಾಹಿಯ ನಬೀಲ್ ಉಮ್ರಿ ಖುರಾನ್ ಪಠಣ ಮಾಡಿದರೆ ಮೊಹಮ್ಮದ್ ಫಹಿಮುದ್ದೀನ ರವರು ಅದರ ಕನ್ನಡ ಅನುವಾದ ಮಾಡಿದರು, ತಾಜುದ್ದೀನ್ ದೋಟಿಹಾಳ ರವರು ಕಾರ್ಯಕ್ರಮ ನಿರೂಪಿಸಿ ಸ್ವಾಗತಿಸಿದರೆ, ಜಮಾತೆ ಇಸ್ಲಾಮಿ ಹಿಂದು ಕೊಪ್ಪಳ ಘಟಕದ ಅಧ್ಯಕ್ಷರಾದ ಸೈಯದ್ ಹಿದಾಯತ ಆಲಿ ಕೊನೆಯಲ್ಲಿ ವಂದಿಸಿದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State